

ಸಂಪುಟ ೭ | ಫೆಬ್ರವರಿ ೧೯೪೯ | ಸಂಚಿಕೆ ೧೧

ಕುಹಕಿಡಿಗಳು

ಭಾರತಕ್ಕೆ ಸ್ವಾತಂತ್ರ ಬರುವಾಗ ದೇಶ ಇಬ್ಭಾಗವಾಯಿತು—

—ಹೈದ್ರಾಬಾದಿಗೆ ಸ್ವಾತಂತ್ರ ಬರುವ ಹೊತ್ತಿಗೆ ಜನ ಇಬ್ಭಾಗವಾದರಂತೆ.

* * *

ಡರ್ಬಾನ್ ಗಲಭೆಗಳ ನಿಷ್ಪಕ್ಷಪಾತ ವಿಚಾರಣೆಗೆ ಡಾ|| ಮಲನ್ ಅವರು ಡಚ್ ಪ್ರವೀಣರನ್ನು ನೇಮಿಸುತ್ತಾರಂತೆ.

* * *

ಒಂದು ಮನೆ ಖಾಲಿಯಾಗುತ್ತೆ ಅನ್ನುವ ಆಶೆಗಾಗಿ ನಮಗೆ ದಿವಾನರೇ ಬೇಡ ಅಂತ ಹೇಳುವುದು ತಪ್ಪಲ್ಲವೇ ?

* * *

ಸಂಗೀತ ಕಾಳನಿಧಿಯವರು ನಾಲ್ಕು ಗಂಟೆ ಹಾಡಿದಾಗ ಕೇಳುತ್ತಿದ್ದವರ ಹೊಟ್ಟೆ ತಾಳ ತಪ್ಪದೆ ತಾಳ ಹಾಕುತ್ತಿದ್ದಿತಂತೆ.

* * *

ಪೂರ್ವ ಯುರೋಪು ಚೀನಾದೇಶದ ಗತಿ ನೋಡಿದ ಅಮೇರಿಕಾದ “ರೆಡ್ ಇಂಡಿಯನ್ನರು” ತಮ್ಮ ಹೆಸರನ್ನು ಬದಲಾಯಿಸಲು ಪ್ರಯತ್ನಿಸುತ್ತಿರುವರಂತೆ.

* * *

ನಮ್ಮೂರ ಹೋಟಲುಗಳಲ್ಲಿ ಇನ್ನು ಮೇಲೆ “ಇಡ್ಲಿ” ಮಾಡಕೂಡದಂತೆ.

—ಅಂದರೆ ಈ ಕಣಿವೆ ಕೆಳಗಿನವರೆಲ್ಲಾ ನಮ್ಮೂರು ಬಿಟ್ಟು ಹೊರಟು ಹೋಗುತ್ತಾರೆಯೋ ?

* * *

ಒಬ್ಬ ಗಣಿತಜ್ಞ ಈ ರೀತಿ ಅಂಕಿ ಅಂಶಗಳನ್ನು ಶೇಖರಿಸಿದ್ದಾನಂತೆ :—

—ಕಳೆದ ವರ್ಷ ನಮ್ಮ ದೇಶದಲ್ಲಿ ರೇಷನ್ ಡಿಪೋಗಳು ಹಿಂದಿನಂತೆ ದಿನಾಲೂ ೫ ಗಂಟೆಗಳಿಗೆ ಬದಲು ೨ ಗಂಟೆ ಕೆಲಸ ಮಾಡಿದುವು.

—ಕಳೆದ ವರ್ಷ ಸರ್ಕಾರದವರು ೩೦ ಹೊಸ ವೈದ್ಯಶಾಲೆಗಳನ್ನು ಏರ್ಪಡಿಸಿದರು.

* * *

ಗೋಡೆಗಳ ಮೇಲೆ ಬರೆಯುವುದು ಶುದ್ಧ ತಪ್ಪು (ಪತ್ರಿಕೆ).

—ಸಿನಿಮಾದವರು ಇದನ್ನು ಹೇಗೆ ಒಪ್ಪಲು ಸಾಧ್ಯ.

* * *

ರಂಗೂನಿನಿಂದ ಬಂದ ೧೦೦೦೦ ಮೂಟೆ ಅಕ್ಕಿಯನ್ನು ಮುಗ್ಗಲು ಎಂದು ಮದ್ರಾಸ್ ಸರ್ಕಾರ ‘ಬೇಡ’ ಎಂದಿತಂತೆ.

—ಅಂದರೆ ನಾವು ಹುಷಾರಾಗಿರಬೇಕು.

* * *

ಮದ್ರಾಸಿನಲ್ಲಿ ರಾಷ್ಟ್ರೀಕರಣವಾದ ಬಸ್ಸುಗಳ ಮುಷ್ಕರವಂತೆ.

— ನಮ್ಮೂರಿನ ಜಟಕಾದವರು ಕೂಡ, ಬಸ್ಸಿನವರು ಮುಷ್ಕರ ಹೂಡುವಂತೆ ಸಕಲ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆಂಬುದು ಸುಳ್ಳಂತೆ.

* * *

ಶಾಂತಿದೂತ ಗಾಂಧೀಜೀಯವರ ಪುಣ್ಯ ದಿನಾಚರಣೆಗೆ ಬೊಂಬಾಯಿ ಸರ್ಕಾರದವರು ಗಲಭೆಯಾಗದಂತೆ ಮುಂಜಾಗ್ರತೆ ಕ್ರಮವನ್ನು ಕೈಗೊಂಡಿದ್ದರಂತೆ

* * *

ಉರಿಗಾಳು

" ಸಂಸ್ಕೃತ ಭಾಷೆ ಜನಸಾಮಾನ್ಯರ ವ್ಯವಹಾರಕ್ಕೂ, ದೇವತೆಗಳ ವ್ಯವಹಾರಕ್ಕೂ ಯೋಗ್ಯವಾದುದು " (ಮಹಾಮಹೋಪಾಧ್ಯಾಯರೊಬ್ಬರು)....ಪ್ರಜಾ ಸರ್ಕಾರ ಜಾರಿಯಲ್ಲಿರುವ ಈಗಿನ ಕಾಲದಲ್ಲಿ, ನಾವು ಯಾರನ್ನೂ ದೇವತೆಗಳೆಂದು ಹೇಳುವಂತಿಲ್ಲ.

* * *

ಚಿಂತಾಮಣಿಯಲ್ಲಿ ಕೂಡಲೇ ಎಣ್ಣೆ ತೆಗೆಯಲು ಒಂದು ಕಾರ್ಖಾನೆ ಸ್ಥಾಪನೆಯಾಗಲಿದೆ. (ಸುದ್ದಿ)......ಚಿಂತಾಮಣಿಯಾದ್ದರಿಂದ, ಎಣ್ಣೆ ಸಿಕ್ಕರೂ ಸಿಕ್ಕಬಹುದು.

* * *

ಕಾಂಗ್ರೆಸ್ಸಿನವರು ಯಾರೂ ಸರ್ಕಾರದ ಅಧಿಕಾರದಲ್ಲಿ ಪ್ರವೇಶಿಸಿ ತೊಂದರೆಯನ್ನುಂಟು ಮಾಡಬಾರದು (ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಭಾಷಣ)...ಸರಿಯಾದ ಮಾತು, ಎಂದು ಎಲ್ಲರೂ ಒಪ್ಪುತ್ತಾರೆ

* * *

" ಮೃತರಾದವರು ವಸು ರುದ್ರ ಆದಿತ್ಯ ಸ್ವರೂಪಗಳನ್ನು ತಾಳುತ್ತಾರೆ. ಆಗ ಅವರು ದೇವತೆಗಳು. ದೇವತೆಗಳ ಭಾಷೆ ಸಂಸ್ಕೃತ. ಅವರು ಅದನ್ನೇ ಆಡುತ್ತಾರೆ. ಆದ್ದರಿಂದ, ಸಂಸ್ಕೃತ ಮೃತಭಾಷೆ ". (ಪ್ರೊ. ಅನಂತಕೃಷ್ಣ ಶಾಸ್ತ್ರೀ)....ವಿಚಾರ ಸರಣಿ ಚೆನ್ನಾಗಿದೆ.

* * *

ಮಹಿಳೆಯರ ಸಲುವಾಗಿ ಸರ್ಕಾರದವರು ಸೂಕ್ತಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ. (ಸರ್ಕಾರದ ಉತ್ತರ)....ಅವೆಲ್ಲ ಕೇವಲ ಪುರುಷಸೂಕ್ತ.

* * *

ಆಹಾರ ಪರಿಸ್ಥಿತಿ ಬಿಗಡಾಯಿಸಿಕೊಂಡಿರುವಾಗ, “ಭೋಜನ್” ಎಂಬ ಅಮೋಘ ಚಿತ್ರ ಬೆಂಗಳೂರಲ್ಲಿ ಪ್ರದರ್ಶಿತವಾಗುತ್ತಿರುವುದು ಸೋಜಿಗ. (ಹಿಂದಿ ಪತ್ರಿಕೆ)....

* * *

“ಪಟ್ಟಣದ ಜನರಿಗೇನು ? ಮನೆಯ ಜೊತೆಗೆ ಹೋಟಲ್ ತಿಂಡಿಗಳನ್ನೂ ತಿಂದು ಹೊಟ್ಟೆ ತುಂಬಿಸಿಕೊಳ್ಳಬಹುದು”. (ನ್ಯಾ ವಿ ಭಾಷಣ)....ಅದಕ್ಕೇ ಮನೆಗಳ ಅಭಾವ ಹೆಚ್ಚಾಗಿರಬೇಕು.

* * *

ಸಂಸ್ಥಾನದ ೫೭೫೫ ಪ್ರೈಮರಿ ಶಾಲೆಗಳಲ್ಲಿ ಒಬ್ಬರೇ ಮೇಷ್ಟ್ರಿದ್ದಾರೆ.... ... ಪಾಪ ! ಆ ಹುಡುಗರ ತಂಡದ ನಡುವೆ ಒಂಟಿಯಾಗಿರಲು ಆತನಿಗೆ ಹೆದರಿಕೆ ಆಗೋದಿಲ್ಲವೆ ?

* * *

“ಸಂಗೀತದಿಂದ ಕೋಪ ಮುಂತಾದ ಮಾನಸಿಕ ರೋಗಗಳನ್ನು ನಾಶ ಮಾಡಲು ಸಾಧ್ಯ”. ಆದರೆ, ಕೇಳುವವರ ಕೋಪ ಕೆರಳುತ್ತದಲ್ಲ.

* * *

ಬರೋಡಾ ಸಂಸ್ಥಾನ ಲೀನವಾಗುವುದಕ್ಕೂ, ಭಾರತ ಸರ್ಕಾರದ ಈಗಿನ ಕುದುರೆ ಜೂಜು ವಿರೋಧದ ನೀತಿಗೂ, ನಿಕಟ ಸಂಬಂಧವಿರಲಾರದೆಂದು ಹಲವರು ಊಹಿಸುವುದು ಸರಿಯಲ್ಲವಂತೆ.

* * *

“ಮಂಡ್ಯ ಜಿಲ್ಲೆಯ ಒಂದು ಹಳ್ಳಿಯಲ್ಲಿ ೨೦ ವರ್ಷಗಳಿಂದ ಪಂಚಾಯ್ತಿ ನಡೆದಿಲ್ಲವಂತೆ”, ಸ್ವರ್ಗ ಅಂದರೆ, ಅದು.

* * *

“ನಾವು ಒಂದು ಹೊಸ ಪುಟವನ್ನು ತಿರುವಬೇಕು”. (ಜಫರುಲ್ಲಾ ಖಾನ್) ...ಹೌದು ! ಪುಟ ಪುಟನೆಗೆಯುವುದನ್ನು ನಿಲ್ಲಿಸಬೇಕು.

* * *

———

ಶುದ್ಧ ಹುಚ್ಚು

‘ಶುದ್ಧ ಹುಚ್ಚು.’ ಅಷ್ಟೇ ನಾನಂದಿದ್ದು. ಅಷ್ಟೇ ಸಾಕಾಗಿತ್ತು ಉತ್ತರ ಕೊಡುಕ್ಕೆ ನಮ್ಮ ಅಧಿಕಾರಿಗೆ ಅವರು ಬಿಡಲಿಲ್ಲ. “ಇದೇನ್ರಿ ಇದು. ಈ ಸಿವಿಲ್ ಲಿಸ್ಟಿನಲ್ಲಿ ನಿಮ್ಮ ಹುಟ್ಟಿದ ದಿನ ನವೆಂಬರ್ ೩೧ ಅಂತಿದೆಯಲ್ರೀ” ಎಂದು ಕೇಳಿದರು

ಗರಮಾಗರಂ ಸಿವಿಲ್ ಲಿಸ್ಟ್ ಯಥಾಪ್ರಕಾರ ಆರುತಿಂಗಳು ಕಳೆದಮೇಲೆ ಹೊಸದಾಗಿ ಬಂದಿತ್ತು. ಅದ ಬಂದರೆ ನಮ್ಮ ಅಧಿಕಾರಿಗಳು ಬೇರೆ ಕೆಲಸ ಎಲ್ಲಾ ಒತ್ತಿಟ್ಟು ಇದನ್ನೇ ಪಾರಾಯಣ ಮಾಡುವ್ಯಘಟ. ಕೆಂಪು ನೀಲಿ ಪೆನ್ಸಿಲ್ ಹಿಡ ಕೊಂಡು ತಮ್ಮ ಮೇಲಿರುವ ಅಧಿಕಾರಿಗಳು ಯಾರ್ಯಾರು ಯಾವ್ಯಾಗ್ಯಾವಾಗ ಹೋಗ್ತಾರೆ? ತನಗೆ ಮೇಲಕ್ಕೇರಲು ಯಾವ ಹೊತ್ತು ಬರಬಹುದು? ಆ ಹೊತ್ತಿಗೆ ಯಾರು ಯಾರು ಮಂತ್ರಿಮಂಡಳದಲ್ಲಿ ಪ್ರಬಲವಾಗಿರುತ್ತಾರೆ? ಅವರಿಗೆ ಈಗಿನಿಂದಲೇ ಜಿಡ್ಡು ಹಚ್ಚೋದೇ? ಇನ್ನೂ ಮೂರು ತಿಂಗಳು ಬಿಟ್ಟು ಬೆಣ್ಣೆ ಕೊಂಡುಕೋಳ್ಳೋದೆ? ಈ ರೀತಿ ಆಯಾ ಹೆಸರು ತಾರೀಖಿನ ಹತ್ತಿರ—ಕೆಂಪು, ವಿಶ್ರಾಂತಿ ಪಡೆಯಲು, ನೀಲಿ, ಬೆಣ್ಣೆ ಹಚ್ಚಲು—ಈ ರೀತಿ-ಗುರ್ತುಮಾಡುತ್ತಾರೆ.

ಆವತ್ತು ಹೀಗೆ ಈ ಭವಿಷ್ಯ ಸಂಶೋಧನೆ ಮಾಡುತ್ತಿದ್ದಾಗಲೇ ಅವರಿಗೆ ನನ್ನ ಹೆಸರಿನ ಮೇಲೆ ಕಣ್ಣು ಬಿದ್ದದ್ದು.

ನೀವನ್ನಬಹುದು. ಅವರ ಕೆಳಗೆ ಇರೋವರ ಹೆಸರಿನಮೇಲೆ ಏಕೆ ಅವರ ಗಮನ ಎಂದು.

ಅದೊಂದು ರಂಗು ನಮ್ಮ ಕಛೇರಿಯಲ್ಲಿ. ಅವರು ಅಧಿಕಾರಿ, ಮೇಲೆ ಹತ್ತು ಮೆಟ್ಟಲ ಕೆಳಗೆ ನಾನು ಪಾಪಿ - ನನಗೂ ಇಪ್ಪತ್ತು ಮೆಟ್ಟಿಲು ಕೆಳಗೆ ಪರಮ ಪಾಪಿ. ಇನ್ನೊಬ್ಬ ನನ್ನ ವೈರಿ– ಆದರೆ ಈ ನನ್ನ ವೈರಿ. ಅಧಿಕಾರಿ ಅವರ ಅಳಿಯ. ಅಧಿಕಾರಿ ಮುಂದು ಮುಂದಕ್ಕೆ ಹತ್ತುವ ಮೆಟ್ಟಿಲು ನೋಡೋದು ಸಹಜ. ಆದರೆ ಅಳಿಯನ ಮೆಟ್ಟಿಲುಗಳನ್ನು ನೋಡುವುದು ಸಹಜ ಅಲ್ಲವೇ. ಅಲ್ಲೇ ನೋಡಿ ನಾನು ಕಂಟಕ. ನನ್ನೇನಾದರೂ ಮಾಡಿ ಕೆಟ್ಟ ಹೆಸರಿಟ್ಟೋ, ಇಲ್ಲಾ ಪ್ರಮೋಷನ್ ಕೊಟ್ಟೋ, ಹೊರದೂಡಿದರೆ, ಅಳಿಯ ಮೇಲೆ ಬರಲು ಅನುಕೂಲ ಹೀಗಾಗಿ ನಾವು ಮೂವರೂ ಒಂದು ಅದ್ಭುತ ತ್ರಿಕೋಣ ವಿಶಿಯಾಗಿದ್ದೇವೆ— ಅದಕ್ಕೇ ಅವರು, ಮೇಲೆ ಹಾಗೂ ಕೆಳಗೆ, ನೋಡುವುದು.

‘ಶುದ್ಧ ಹುಚ್ಚು’ ಸಾರ್. ಅಚ್ಚು ಹಾಕಿದಾಕ್ಷಣವೇ ಸತ್ಯವಾದೀತೇ ನವೆಂಬರಿನಲ್ಲಿ ಮೂವತ್ತೊಂದು ದಿನಗಳಿಲ್ಲಿದೆ ಸಾರ್ ‘ಅಂದೆ’ “ಅದಕ್ಕೇರಿ? ನಿಮ್ಮನ್ನು ಕೇಳೋದು, ಇದೇನೋ ಸುಳ್ಳು ವಯಸ್ಸು ಕೊಟ್ಟಹಾಗೆ ಕಾಣುತ್ತೇ” ನೀವು. ಸರಕಾರದ ಹತ್ತಿರ ಸುಳ್ಳು ಹೇಳೋದೇ!

‘ಅವರು ಅಚ್ಚುತಪ್ಪಿದರೆ ನಾನೇನು ಮಾಡಲಿ ಸಾರ್. ಬೇಕಾದರೆ ನನ್ನ ಜಾತಕ ತಂದು ತೋರಿಸುತ್ತೇನೆ. ಸಾರ್. ಒಂದಲ್ಲ ಹತ್ತು ತಂದು ತೋರಿಸುತ್ತೇನೆ ಸಾರ್’ ಅಂದೆ.


‘ಗೊತ್ತ್ರೀ! ಹತ್ತಲ್ಲ ನೂರು ಜಾತಕ ತರ್ತೀರಿ ಗೊತ್ತ್ರೀ. ಅದಲ್ಲದೆ ಬೇರೆ ಏನಾದರೂ ಸಾಕ್ಷಿ ಉಂಟೆ?’

‘ಎಲ್ಲಿ ಸಾರ್ ಆ ಸಿವಿಲ್ ಲಿಸ್ಟ್ ಕೊಡಿ’ ಎಂದೆ.

ಅದನ್ನ ತೆಗೆದು ನೋಡಿದೆ. ಬದುಕಿಕೊಂಡೆ. ನಾನೇನೋ ಸುಳ್ಳು ವಯಸ್ಸು ಎಲ್ಲರ ಹಾಗೇ ಕೊಟ್ಟಿದ್ದೆ. ಆದರೆ ಯಾರೂ ಹೀಗೆ ಸಿಕ್ಕಿಹಾಕಿಕೊಂಡಿತ್ತಿಲ್ಲ ಹೇಗಪ್ಪಾ ಬಚಾವಾಗೋದು ಅಂತಿದ್ದಾಗ ಅದರಲ್ಲಿ ಏನು ಅಚ್ಚೊತ್ತಿತ್ತು ಗೊತ್ತೆ? ೧೮೦೫ ನೇ ಇಸವಿ ನವೆಂಬರ್ ಮೂವತ್ತೊಂದು ಅಂತ.

ಅವರಿಗೆ ತೋರಿಸಿದೆ. ಆಗಲೇ ಅವರೂ ಧನಿಗೂಡಿಸಿದರು ‘ಶುದ್ಧ ಹುಚ್ಚು ಇವರೆಲ್ಲಾ’ ಅಂತ.

—o—



ಶ್ರೀರಾಮ ನವಮಿ

— —— o ——— —

" ಇದೇನು ಎಲ್ಲಾ ಹಾಗೇ ಬಿಟ್ಟು ಬಿಟ್ಟಿದ್ದಿರಲ್ಲಾ – ಇನ್ನೊಂಚ ಪಾನಕ ತಕ್ಕೊಳ್ಳಿ ರಸಾಯನ ಹಾಕಲೆ? ಕೊಸುಂಬ್ರಿ ಸೇರೊಲ್ಲವೆ ? ನಿಧಾನವಾಗಿ ತಿನ್ನಿ ಮೀನಾಕ್ಷಮ್ಮನೋರೆ - - - "

" ಉಹೂಂ– ಸಾಕು ಸಾಕು ಎಷ್ಟೊಂದು ಹಾಕಿಬಿಟ್ರಲ್ರಿ, ನೀವು ಯಾವಾಗ಼್ಲೂ ಹೀಗೇಕಣ್ರಿ. ಎದುರು ಮನೆ ನಾಗೂಬಾಯಿ ಬೇಡಾ ಬೇಡಾಂದ್ರು ನಾಲ್ಕು ಲೋಟ ನೀರುಮಜ್ಜಿಗೆ ಕುಡಿಸಿಬಿಟ್ರು – ಹಾಹಾ – ಬೇಡ್ರೀ ತ್ಗೊ ತ್ಗೊ - ನಾನು ಚೆಲ್ಲಿಬಿಡ್ತೇನಷ್ಟೆ - - "

" ಶ್ರೀರಾಮದೇವರ ಪ್ರಸಾದ ಹ್ಯಾಗೆ ಚೆಲ್ತಿರೊ ಚೆಲ್ಲಿ - ನೀವು ಇನ್ನೊಂದು ದೊನ್ನೆ ರಸಾಯನ ತಿನ್ನಲೇ ಬೇಕು - - "

" ನಿಮ್ಮ ದಮ್ಮಯ್ಯ ಸೀತಮ್ಮನೋರೆ - ಕೊಂಚ - ಸಾಕು ಸಾಕು - - - ಅಬ್ಬ - - " " ಅದಷ್ಟು ಮುಗಿಸಿಬಿಡಿ ಹೋಗಲಿ - - ರಾಮದೇವರ ಪ್ರಸಾದ ಚೆಲ್ಲಬಾರದಮ್ಮಾ - - ಚೆಲ್ಲಬಾರದು " " - - - ಸೀತಮ್ಮನೋರೆ ಈ ರಸಾಯನ ಏನು ರುಚಿಯಾಗಿದೇಂತಿರ - - - ಏನೆ ಹೇಳಿ ಈ ರಾಮನವಮಿ ನೀವು ಮಾಡೊ ಅಷ್ಟು ಅದ್ದೂರಿಯಾಗಿ ಯಾರೂ ಮಾಡೊಲ್ಲಿ - - - "

" ಮಾಡದೆ ಇದ್ರೆ ಹ್ಯಾಗ್ರಮ್ಮಾ - - - - "

" ಅದರಲ್ಲೂ ಈ ರಸಾಯನ - - - "

" ಚಂದ್ರ ಹಲಸಿನ ತೊಳೆ - ಜೇನು ತುಪ್ಪ - ನಂಜನಗೂಡು ರಸಬಾಳೆ - ಮಾಗಿದ ಬೇ ಪಹಣ್ಣು ಖರ್ಜೂರ ಯಾಲಕ್ಕಿ ಕೇಸರಿ - - ಯಾರ ಉಪಕಾರಕ್ಕೆ ಚೆನ್ನಾಗಿದ್ದೀತ್ರಿ - ಈ ರಸಾಯನ ಶ್ರೀರಾಮರಿಗೆ ಮಹಾ ಪ್ರೀತಿ - "

" ಅದ್ಹೇಗೆ ? - - "

" ಇದೇ ರಸಾಯನ ತಾನೆ ಜಾಂಬುವಂತ ಶ್ರೀರಾಮರು ಸುಗ್ರೀವ ನಗರಿ ಹೊಕ್ಕಾಗ ಅರ್ಪಣೆಮಾಡಿದ್ದು - - "

" - - - ಹಾಗೋ - ಸಮಾಚಾರ. ಅಂದ್ಹಾಗೆ ನಿಮ್ಮೆಜಮಾನ್ರು ಇನ್ನೂ ಊರಿಗೆ ಬಂದಿಲ್ಲವೆ ? " "

" ಯಾವ ಪ್ರಜೆ ಪರಿತಪಿಸುತ್ತಿದ್ದಾನೋ - - ಆತನ್ನ ಸಂತೈಸೋಕೆ ಯಾವ ಕಳ್ಳೀಲಿ ಅಲಿತಿದ್ದಾರೆಯೊ - ಇಲ್ಲಿ ನಾನು ವನವಾಸ ಅನುಭವಿಸೋದು ಅವರಿಂಗೆಲ್ಲಿ ಅರಿವಾಗುತ್ತೆ ಮೀನಾಕ್ಷಮ್ಮ - - "

" ವನವಾಸ ! ಅದ್ಯಾಕ್ರಿ ಹೀಗಂತೀರ - ಶ್ರೀರಾಮನವಮಿ ದಿವಸ - ಬಿಡ್ರಿ ಅನ್ನಿ - - "

" ಬಿಡ್ತೀನಿ - ಕಟ್ಕೊಂಡಮೇಲೆ ವನವಾಸವೊ ಗಿನವಾಸವೊ - ಅನುಭವಿಸಲೇ ಬೇಕಷ್ಟೆ ಆದರೂ ಸೀತಾಪರಿತ್ಯಾಗ ಪ್ರಕರಣ ನಡೆಯುದಿರಲೀಂತ ಶ್ರೀರಾಮನವಮೀಲಿ ಇಷ್ಟು ಭಕ್ತಿ ಇಷ್ಟು ರಸಾಯನ. ಅರ್ಥವಾಯಿತೆ ಮೀನಾಕ್ಷಮ್ಮನೋರೆ ? - "

" ಸೀತಾಪರಿತ್ಯಾಗ ? ಇದೇನ್ರಿ ಹೀಗಂತೀರ ಸೀತಾಬಾಯಿ ? - - - "

" ಅಷ್ಟಲ್ಲದೆ ಇನ್ನೇನ್ರಿ ಉಳಿದಿದೆ - ಸ್ವಯಂವರ - ಅಯೋಧ್ಯೆ - ಕೈಕೆ - ವನವಾಸ - ರಾವಣಾಸುರ - ಆಂಜನೇಯ - ಪಟ್ಟಾಭಿಷೇಕ - ಇಷ್ಟಾದಮೇಲೆ ಅಗಸನ ಮಾತು ಸೀತಾಪರಿತ್ಯಾಗ ತಾನೆ ಉಳಿದಿರೋದು ? - - - "

" - - ಶ್ರೀಮದ್ರಾಮಾಯಣವೇ ಆಯ್ತಲ್ಲ "

" ರಾಮಾಣ್ಯವೇ ಇನ್ನೇನು - - - "

" ಬಿಡಿಸಿಹೇಳಿ ಸೀತಮ್ಮನೋರೆ - - ಕೇಳೋಣ "

" ತಮಾಷೆಮಾಡಿ ಮೀನಾಕ್ಷಮ್ಮನೋರೆ - ಹಾಸ್ಯಮಾಡಿ ! ಆದರೂ ಕೇಳಿ. ನನ್ನ ಮನಸ್ಸ ಕೊಂಚ ಸಮಾಧಾನ ಹೊಂದುತ್ತೆ - - - ಅಲ್ವೆ ನಿಮ್ಮ ಹತ್ತಿರ ಅಲ್ಲದೆ ಇನ್ಯಾರ ಹತ್ತಿರ ತೋಡಿಕೊಳ್ಳಲಿ - ಈ ರಾಮನವಮಿ ರಾಮಾಯಣನ - ನಮ್ಮ ತಂದೆಗೆ ನಾನೊಬ್ಬಳೇ ಮಗಳು ಧನಸ್ಸು ಮುರಿದವರೊಡನೆಯೇ ನನ್ನ ಸ್ವಯಂವರವಾಗಬೇಕೆಂದು ಹಟ ಹಿಡಿದೆ ಅವರು ಒಪ್ಪಿದರು. ನಾಹಿಡಿದ ಮಾಲೆ ನಮ್ಮ ಎದುರು ಮನೆಯಲ್ಲಿ ಓದಿಕೊಂಡಿದ್ದ ರಾಮರಾಯರಿಗೆ - ಇಲ್ಲವೆ ಪಕ್ಕದ ಮನೆಯ ಅಪ್ಪಚ್ಚಿಗೆ ಬೀಳಬೇಕೆಂದು ನನ್ನ ಹಂಬಲ. ಆದರೂ ಧನಸ್ಸು ಮುರಿಯಬೇಕಲ್ಲವೆ ? - - - "

" ಅಲ್ಲವೆ ಮತ್ತೆ - - - ಆಮೇಲೆ ? "

" ಸನ್ ಸಾವಿರದೊಂಭೈನೂರ ನಲವತ್ತೆರಡು ನಾನಾಗ S. S. L. C. - - ಸತ್ಯಾಗ್ರಹ - ಸ್ವಾತಂತ್ರ್ಯ ಸಮರ ಶಾಲೆಗೆ ಶರಣು ಹೊಡೆದು Quit India ಎಂದು ಮೆರವಣಿಗೆ ಹೊರಟೆ. ಗಾಂಧಿಕಿ ಜೈ ಅಂದೆ - ಟೆಲಿಫೋನ್ ಕಿತ್ತು -

ರೈಲು ಉರುಳಿಸಿ - ಪೋಸ್ಟಾಫೀಸು ಸುಡೋ ಕಾಲ ಅದು - ಆ ಕಾಲದಲ್ಲೇ ರಾಮರು ಧನಸ್ಸ 'ಮುರಿದರು. ಎದುರು ಮನೆ ರಾಮರಾಯರು ಟೆಲಿಫೋನ್ ಕಂಬಕ್ಕೆ ಹಗ್ಗ ಬಿಗಿದು ಎಳೆದು ಬಗ್ಗಿಸಿ ಬೀಳಿಸಿದ್ದ ಕಣ್ಣಾರೆ ಕಂಡೆ ಹಿಡಿದ ಮಾಲೆ ಅವರಿಗೇ ಹಾಕಿದೆ. ನನ್ನ ಸ್ವಯಂವರ ನಡೆದುಹೋಯಿತು. ತಂದೆ ಯವರು ಹೊಲಸಿ ಕೊಟ್ಟ ಸೂಟು ಬೂಟು ಬಿಸಾಕಿ ಖಾದಿ ಧರಿಸಿ ನನಗೂ ನಾರು ಮಡಿ (ಖದ್ದರ್ ಸೀರೆ) ಉಡಿಸಿ ಅವರ ಮನೆಗೆ ಕೈಹಿಡಿದು ಕರೆದೊಯ್ದರು - - "

" - - ಸರಿ - - ಆಮೇಲೆ - - "

" ದೇಶಪ್ರೇಮಿ ಧೀರ ರಾಮರ ಕೈ ಹಿಡಿವೆನೆಂದು ಹಿಗ್ಗಿ ಅತ್ತೆಮನೆ ಹೊಕ್ಕೆ. ನಮ್ಮ ಮಾವನವರಿಗೆ ಇಬ್ಬರು ಹೆಂಡಿರು - ಕಿರಿಯ ಕೈಕೆ ತನ್ನ ಭರತನಿಗೇ ಇರೋ ಮನೆ - ಹಳ್ಳಿಯ ತೋಟ ಬೇಕು - ಅವನೇ ಶಾನುಭೋಗಗಿರಿಯ ಪಟ್ಟಕ್ಕೇರ ಬೇಕೆಂದು ಹಟ ಹಿಡಿದಳು ನನ್ನ ರಾಮರು ತಂದೆಯ ಮನಸ್ಸ ನೋಯಿಸದೆ - ಗಾಂಧಿ ಗುಡಿಯೇ ನನಗೆ ರಾಜ್ಯ. ದೀನ ಸೇವೆಯೇ ನನಗೆ ಶಾನ ಭೋಗಗಿರಿ ಲೇ, ನಾರುಮಡಿ ಉಡ, ಹೊರಡು ಹೈದರಾಬಾದಿಗೆ ಎಂದು ಹಾಸಿಗೆ ಕಟ್ಟಿ ಪೆಟ್ಟಿ ಹಾಕಿ ಹೊರಟರು - - "

" ಹೈದರಾಬಾದಿಗೆ !—ಅಲ್ಲಿಗೆ ಹೊರಟರಾ ? "

" ಹೂಂ - - ರೈಲು ಹತ್ತೋಕೆ ಮುಂಚೆ ಭರತ ಓಡಿಬಂದು ಅಣ್ಣನ ಪಾದುಕೆ ಒಯ್ದ - - "

" ಪಟ್ಟಾಭಿಷೇಕ! ಪಾದುಕಾ ಪಟ್ಟಾಭಿಷೇಕಾನ್ನಿ"

" ಅಲ್ಲ ಮೀನಾಕ್ಷಮ್ಮನೋರೆ, ಮರೆತು ಭರತನ ಹೊಸ ಜೋಡು ಹಾಕಿ ಕೊಂಡು ಬಂದಿದ್ದರು ಅದನ್ನ ವಾಪಸ್ಸ ಒಯ್ದ - - - "

" ಅಯ್ಯೋ ಎಂಥಾ ಜನ ಇರ್ತಾರ್ರಿ - - ಆಮೇಲೆ ? "

" ಹೈದರಾಬಾದಿನಲ್ಲಿ ನಮ್ಮವರ ಜೈಕಾರ ನಡೆಯಲಿಲ್ಲ. ವನವಾಸವೇ ಆಗಿತ್ತು ಗಾಂಧಿ ಟೋಪಿಯವರ ಪಾಡು. ಹರಿಜನಸೇವೆ— ಹಳ್ಳಿಗರಿಗೆ ಬುದ್ಧಿ ಹೇಳಬೇಕು ಎಂದು ನನ್ನೂ ಕಟ್ಟಿಕೊಂಡು ಹಳ್ಳಿ ಹಳ್ಳಿ ತಿರುಗಿದರು, ಹನ್ನೆರಡಲ್ಲ ಆರ ವರ್ಷ ಪೀಡಿಸಿದರು ೧೯೪೮ ಹೈದರಾಬಾದು ರಜಕರರ ಗಲಾಟೆ ಲೂಟಿ ಹಾವಳಿ ಪ್ರಾರಂಭವಾಯಿತು. ಗಾಂಧಿ ಟೋಪಿಯವರನ್ನೆಲ್ಲಾ ಹಿಡಿದು ಜೈಲು ತೋರಿಸಿದರು ನಾವು ಗಡಿಯೂರಾದ ಹೊಸಪೇಟೆ ಬಳಿಯ ಹಳ್ಳಿಯಲ್ಲಿದ್ದೆವು. ಆಗಿಂದಾಗ್ಗೆ ನಮ್ಮ ಹಳ್ಳಿಗೂ ರಜಕರರು ಧಾಳಿ ಮಾಡುತ್ತಿದ್ದರು - - "

" ಅಬ್ಬ ಭಯವಾಗುತ್ತಿರಲಿಲ್ಲವೇನ್ರಿ - . "

" ಏನುಮಾಡೋಕಾಗುತ್ತೆ – ಒಂದು ದಿನ ಊಟಮಾಡಿ ನಾನು ಅವರು ಇಬ್ಬರೂ ಮನೆಮುಂದೆ ನಿಂತಿದ್ದೆವು. ಹತ್ತಿರದಲ್ಲೇ ಕಾಣುತ್ತಿದ್ದ ಗದ್ದೆಯಲ್ಲಿನ ರಸದಾಳೆ ಕಬ್ಬು ನೋಡಿ ನನಗೆ ಬೇಕೆನಿಸಿತು " ' ಪ್ರಿಯಾ ಆ ರಸದಾಳೆ ತಂದು ಕೊಡಿ ' ಎಂದು ಕೇಳಿದೆ. " ಪ್ರಿಯೆ ಅದು ಮಾರೀಚನೆಂಬ ಮರೀಚಿಕೆ ಇರಬಹುದು - - ಅದು ಬೇಡ " ಎಂದರು ನಾನು ಹಟ ಮಾಡಿದೆ ' ನಿನ್ನಿಷ್ಟ ನಿನಗೇಕೆ ಇಂತು ಮನನೋಯಿಸುವುದು ? ' ಎಂದು ಕುಡುಗೋಲು ಹಿಡಿದು ಗದ್ದೆ ಕಡೆ ಹೊರಟರು. ನನ್ನ ಗ್ರಹಚಾರ ಕಣ್ರಿ ಮೀನಾಕ್ಷಮ್ಮ ಅವರು ಅತ್ತ ಹೊರಟರು ಇತ್ತ ರಜಕರದು ಲಗ್ಗೆ ಹೂಡಿದರು. ಲೂಟಿ - ಗುಂಡಿನೇಟು - ಅಪಹರಣ ಗೊಂದಲ ಇದ್ದಕ್ಕಿದ್ದ ಹಾಗೆ ಶುರುವಾಯಿತು ಆ ರಾಕ್ಷಸರಿಂದ - "

" ಅಬ್ಬಾ – ಏನು ಭಯಂಕರರೀ (- - "

" ಭಯಂಕರಾಂತೀರ - - ಹಳ್ಳಿಗರೆಲ್ಲಾ ದಿಕ್ಕಾಪಾಲಾಗಿ ಓಡಿದರು. ನಾನು ' ರಾಮ ರಾಮ ' ಎಂದು ಓಡಿದೆ - ಆದರೆ ಒಬ್ಬ ರಜಕರ ರಾವಣ ಸನ್ಯಾಸಿ ಕೈಗೆ ಸಿಕ್ಕಿಬಿಟ್ಟೆ. ನನ್ನನ್ನು ಅಪಹರಿಸಿದರು ಆ ರಾವಣ ರಜಕರರು - ,'

" ಅಯ್ಯೊ ಎಷ್ಟು ಅನುಭವಿಸಿದ್ದೀರಿ ಸೀತಾಬಾಯಿ ! "

" ನೆನಸಿಕೊಂಡರೆ ಮೈ ಜುಂ ಅನ್ನುತ್ತೆ ಮೀನಾಕ್ಷಮ್ಮನೋರೆ - ಕೇಳಿ - ನಮ್ಮ ಯಜಮಾನರು ಪರ್ಣವಟಿಗೆ ಬಂದು ನಾನು ಇಲ್ಲದ್ದು ನೋಡಿ ದುಃಖಿತರಾಗಿ " ಹೇ ಸೀತಾ ! ಹೇ ಜಾನಕಿ ! ಎಲ್ಲಿಪೋದೆ - " ಎಂದು ಪರಿತಪಿಸಿದರು. ಇನ್ನು ಅಲ್ಲಿದ್ದರೆ ತೊಂದರೆ ಎಂದೆಣಿಸಿ ಹೊಸಪೇಟೆ ಸೇರಿದರು ರಜಕರರ ಹಾವಳಿ ಹಿಮಾಲಯದಷ್ಟೇರಲು ಭಾರತ ಸರ್ಕಾರ ಪೋಲೀಸರನ್ನು ಕಳಿಸಿದ್ದು ಗೊತ್ತಷ್ಟೆ? ಮೈಸೂರಿನ ಸೈನಿಕರೂ ಬಂದಿದ್ದರು ಈ ರಾವಣರನ್ನು ಸದೆಬಡಿಯಲಿಕ್ಕೆ ನನ್ನ ರಾಮರು ನನ್ನನ್ನು ಪತ್ತೆ ಹಚ್ಚಲು ಮೈಸೂರ ಸೈನಿಕರಿಗೆ ಹಲ್ಲುಗಿರಿದರು ಮೈಸೂರ ಪಡೆಯಲ್ಲಿ ನಮ್ಮ ಮಾವನವರ ಬಳಿ ಕೆಲಸಮಾಡುತ್ತಿದ್ದ ಹನುಮಪ್ಪನೂ ಸಿಪಾಯಿಯಾಗಿ ಬಂದಿದ್ದ ಹನುಮಪ್ಪನಿಗೆ ಶ್ರೀರಾಮರು ಸೀತಾದೇವಿಯ ಅಪಹರಣದ ಕತೆ ಹೇಳಿದರು ಚಿಕ್ಕಂದಿನಿಂದಲೂ ಇವರನ್ನು ಬಲ್ಲವನಾದ ಆ ಆಂಜನೇಯ " ಆಳಿಲು ಸೇವೆ ಮಳಲಭಕ್ತಿ ಹೆಂಗೂ ಕೋವಿ ಕೊಟ್ಟವರೆ ಒಂದು ಕೈ ನೋಡಿ ಅಮ್ಮಾವರನ್ನು ಪತ್ತೆಮಾಡೇ ಬಿಡ್ತಿನಿ ಬುದ್ಧಿ " ಎಂದು ಬಾಲ ಬೀಸಿದ ಚೂಡಾಮಣಿ ತಂದಾನೆಂದು ಇವರು ಹಿಗ್ಗಿದರು. ಹನುಮಪ್ಪ ಲಂಕೆಗೆ ಹಾರಿಯೇ ಬಿಟ್ಟ - - "

" ಆಹ - - ಚೆನ್ನಾಗಿದೆ ರಾಮಾಣ್ಯ - - "

" ಆಮೇಲೆ ಗೊತ್ತೆ ಇದೆಯಲ್ಲ ಸಾಬರು ಶರಣು ಹೊಡೆದರು – ಈ ರಾವಣ ರನ್ನ ಸದೆ ಬಡಿದು ಹನುಮಪ್ಪನ ಪಡೆ ನನ್ನನ್ನ ಬಿಡುಗಡೆಮಾಡಿ - ಶ್ರೀರಾಮರ ಮುಂದೆ ತಂದೊಪ್ಪಿಸಿದರು. ಎಲ್ಲಿ ' ಅಗ್ನಿಪರೀಕ್ಷೆ ನಡೆಯಲಿ " ಎಂದೆಂದುಬಿಡು ವರೋ ಎಂದು ಬೆದರಿದ್ದೆ. ಆದರೆ ಅವರು ಒಂದು ಮಾತೂ ಆಡದೆ ಕರೆ ದೊಯ್ದರು ನನಗೆ ಮಹದಾನಂದನಾಯಿತು

" ಅಲ್ಲವೆ ಮತ್ತೆ - - - "

" ಇದೇ ಸಮಯಕ್ಕೆ ಅತ್ತೆ ಮನೆಯಿಂದ ಭರತ ಕಾಗದಬರೆದ. ಮಾವ ನವರಿಗೆ ಸಕತ್ ಖಾಯಿಲೆ ಎಂದು. ಈ ಹೊತ್ತಿಗಾಗಲೆ ಕೈಕೆ ಕಾಲರಾದಿಂದ ಕೈಲಾಸ ಸೇರಿದ್ದಳು. ನಾವು ಊರಿಗೆ ಹೋದ ಎರಡನೆ ದಿನ ದಶರಥ ಮಹ ರಾಜರು ಕೈಕೆ ಇದ್ದೆಡೆಗೆ ತೆರಳಿದರು - - - ಈ ಹೊತ್ತಿಗೆ ಭರತ ನನ್ನ ರಾಮರನ್ನ ಆದರಿಸಿ ಅವರೇ ಶಾನುಭೋಗ ಪಟ್ಟಕ್ಕೇರಬೇಕೆಂದೂ ಹಳ್ಳಿ ತೋಟ ನೋಡಿಕೊಳ್ಳ ಬೇಕೆಂದೂ ಬೇಡಿ - ಅವನು ತಾತಾ ಕಂಪನಿ ಸೇರಿಬಿಟ್ಟ. ಈಗ ನೋಡಿ ಪಟ್ಟಾಭಿ ಷೇಕ ಕಾಲ - - ಸೀತೆ ಸುಖವಾಗಿರೋ ಕಾಲ - - ರೈತರನ್ನೆಲ್ಲಾ ಸುಖವಾಗಿಟ್ಟು ಕೊಂಡಿದ್ದಾರೆ - - - "

" ಅಬ್ಬಾ - - ಎಷ್ಟು ಕಷ್ಟ ಅನುಭವಿಸಿದ್ದೀರ್ರಿ - - "

" ಈ ಕಾಲದಲ್ಲಿ ಯಾರೋ ರೈತ ಅಕಸ್ಮಾತ್ತಾಗಿ ತಾರಿಗೆ ಹೇಳದೆ ಹೋದ ಹೆಂಡತಿನ್ನ ಮನೆಗೆ ಸೇರಿಸೋಕೆ ನಾನೇನು ಶಾನುಭೋಗ ರಾಮಣ್ಣೋರೆ ? ಎಂದು ಬಿಟ್ಟರೆ ಎಲ್ಲಿ ಮತ್ತೆ ಸೀತಾಪರಿತ್ಯಾಗವಾಗುತ್ತೋ ಎಂದು ಆ ಬುದ್ಧಿ ಕೊಡದಿರ ಲೆಂದು ಶ್ರೀರಾಮನಲ್ಲಿ ಪ್ರತಿ ಶ್ರೀರಾಮನವಮಿ ದಿನ ಈ ರಸಾಯನ ನೇವಿದ್ಯಮಾಡಿ ಬೇಡಿಕೊಳೋದು - ಮೀನಾಕ್ಷಮ್ಮನೋರೆ - - "

" ಓಹೋ ಅದಕ್ಕೆ ಈ ಆದ್ದೂರಿಯೋ - - ಸರಿ ಹೊತ್ತಾಯಿತು ಬರ್ತೀನೆ ಸೀತಮ್ಮನೋರೆ - - "

" ಬರ್ತ್ತೀರಾ - - ಒಳ್ಳೇದು ಕುಂಕುಮ ಕೊಳ್ಳಿ - - - "

— ದಾಶರಥಿ ದೀಕ್ಷಿತ್

ಯಂತ್ರ ಯುಗ


ಇದು ಯಂತ್ರ ಯುಗ; ಮಂತ್ರ ಹೇಳಿದರೆ, ಮಾವಿನಕಾಯಿ ಉದುರುವುದಿಲ್ಲ. ಆ ಕಾಲ ಹೋಯಿತು. ಈಗ, ಕೆಳಗೆ ನಿಂತು ಗುರಿಯಿಟ್ಟು ಕಲ್ಲು ಬೀರಲೇಬೇಕು ಯಂತ್ರಯುಗವೆಂದರೆ. ಮಾನವ ಜೀವನದ ವಿವಿಧ ಲೀಲಾವಿಶೇಷಗಳಿಗೆ ಅಮೇರಿಕನ್ನರ ಹಾಗೆ ಯಂತ್ರಗಳನ್ನು ಅಳವಡಿಸಿಕೊಳ್ಳುವುದು ಎಂದು ಮಾತ್ರವಲ್ಲ. ನಾವು ಮಾಡುವ ಪ್ರತಿಯೊಂದು ಕೆಲಸದಲ್ಲೂ, ಯಂತ್ರಶಾಸ್ತ್ರವನ್ನನುಸರಿಸಿ, ಒಂದು ರೀತಿಯ ಯಾಂತ್ರಿಕತನವನ್ನು ಅವಲಂಬಿಸುವುದು, ಎಂದರ್ಥ. ಉದಾಹರಣೆಗೆ: ಕುರ್ಚಿಯಲ್ಲಿ ಕೂರುವುದು. ಒಬ್ಬ ಆಸಾಮಿ ಈಗ, ಕುರ್ಚಿಯಲ್ಲಿ ಕೂರುವಾಗ, (೧) ಅದರ ಮುಂದೆ ಹೋಗಿ ನಿಲ್ಲಲು ಎರಡು ಹೆಜ್ಜೆ ಇಡುತ್ತಾನೆ (೨) ಹಿಂತಿರುಗಿ ಅದರ ಆಳ ಅಗಲಗಳನ್ನು ಪರೀಕ್ಷಿಸಿ ಅಂದಾಜು ಹಾಕುತ್ತಾನೆ (೩) ಅದರ ಬಲ ಭುಜದಮೇಲೆ ತನ್ನ ಬಲಗೈಯನ್ನು ಬೆನ್ನ ಹಿಂದಿನಿಂದಲೇ ಇರಿಸುತ್ತಾನೆ (೪) ಅಂತೆಯೇ ಎಡ ಭುಜದಮೇಲೆ ಎಡಗೈ ಇರಿಸುತ್ತಾನೆ (೫) ಒಂದು ಹೆಜ್ಜೆ ಹಿಂದಕ್ಕೆ ಸರಿಯುತ್ತಾನೆ (೬) ಮತ್ತೊಂದು ಬಾರಿ ಅಂದಾಜು (೭) ಕೈಗಳಮೇಲೆ ಭಾರವನ್ನಿಳಿಸುತ್ತಾನೆ (೮) ಗುಂಡುಸೂಜಿ ಗಾಬರಿಯಿಂದ ತುಸು ಅನುಮಾನಿಸುತ್ತಾನೆ (೯) ಭಗವಂತನನ್ನು ಧ್ಯಾನಿಸಿ ತನ್ನ ಇಷ್ಟದೇವತೆಗೆ ಹರಕೆ ಹೊತ್ತುಕೊಳ್ಳುತ್ತಾನೆ (೧೦) ಮೆಲ್ಲನೆ ಭೂಮಿಯ ಸೆಳೆತಕ್ಕೆ ತನ್ನ ಕಳೇಬರವನ್ನೊಪ್ಪಿಸುತ್ತಾನೆ (೧೧) ತಳ ಸಿಕ್ಕುತ್ತದೆ (೧೨) ಗುಂಡುಸೂಜಿಯ ಅಭಾವದಿಂದ ಆನಂದ ಉಕ್ಕಿ ಮುಖದಲ್ಲಿ ಮಂದಹಾಸ ಮಿನುಗಿಸುತ್ತಾನೆ....... ಇದು ಯಾಂತ್ರಿಕ ಮನೋಭಾವ ಇಲ್ಲದವರ ಚರ್ಯೆ. ಇದರಲ್ಲಿ, ಸಮಯನಷ್ಟ, ಸಂದೇಹನಷ್ಟ, ದೇಹನಷ್ಟ, ಬಹಳ. (೧)ನ್ನು ನಾವು ಒಂದೇ ಉದ್ದ ಹೆಜ್ಜೆಯಲ್ಲಿ ಮುಗಿಸಿ, (೨)ನ್ನು ಮಾಡದೆ ಬಿಟ್ಟು ೯ ಇರುವುದರಿಂದ ೨ ಬೇಕಿಲ್ಲ — ೩ ಮತ್ತು ೪ನ್ನು ಒಟ್ಟಿಗೆ ಮಾಡಿ, ೬ನ್ನೂ ಹಾರಿ, ೭, ೮, ೧೦, ೧೧ನ್ನು ಸರಕ್ಕನೆ ಒಂದೇ ಚಲನದಲ್ಲಿ ಪೂರೈಸಿ, ೧೨ನ್ನು ಮೊದಲಿಂದಲೇ ಮುಖದಲ್ಲಿ ಸೂಸಿಬಿಟ್ಟರೆ ....ಅಂದರೆ, ನಾವು "ಮೆಕಾನಿಕಲ್" ಮನಸ್ಸಿನವರಾದರೆ, ಈ ನಷ್ಟಗಳು ಯಾವುದೂ ತಗುಲದೆ, ಲಾಭ ಪಡೆಯಬಹುದು. ಹಾಸಿಗೆಯಲ್ಲಿ ಮಲಗಲು, ವನ್, ಅದರ ತುದಿಯಲ್ಲಿ ನಿಂತ; ಟೂ, ಬಿದ್ದ—ಸಾಕು. ಬೈಸಿಕಲ್ಲು ಹತ್ತಲು, ವನ್, ಅದನ್ನು ಉದ್ದಕ್ಕೂ ಸರಕ್ಕನೆ ವೇಗವಾಗಿ ನೂಕಿದ, ಟೂ, ಹಿಂದಿನಿಂದ ನೆಗೆದು ಓಡುತ್ತಿರುವ ಸೀಟಿನಮೇಲೆ ಕೂತು ಹ್ಯಾಂಡಲ್ ಬಾರ್ ಹಿಡಿದ— ತೀರಿತು. ಔಷಧಿ ಕುಡಿಯಲು, ಕಾರ್ಕ್ ಸಹಿತವಾಗಿ ಬಾಯೊಳಗಿಟ್ಟು, ಹಲ್ಲಿಂದ

ಬಿರಟೆ ತೆಗೆದು ಒಂದು ಔನ್ಸನ್ನು ಹೀರಿ ತಿರುಗಿ ನಾಲಗೆಯಿಂದ ಬಿರಟೆಯನ್ನಿರಿಸಿ ಹಲ್ಲಿಂದ ಕಚ್ಚಿ ಬಿಗಿಪಡಿಸಿದರಾಯಿತು. ಕೈಗಳ ಸುಸ್ತು ಪರಿಹಾರ. ರೈಲುಗಾಡಿ ಹತ್ತಲು, ಬೆಡ್ಡಿಂಗಿನಮೇಲೆ ನಾವು ಕೂತಿದ್ದ ಹಾಗೆಯೇ, ಪೋರ್ಟರು ಮಹಾಶಯ, ಆ ಬೆಡ್ಡಿಂಗನ್ನು ನಾವು ಸಹಿತವಾಗಿಯೇ ಕಿಟಕಿಯೊಳಗಿಂದ ಎಸೆದರಾಯಿತು! ನಾವೊಂದು ಬಾರಿ, ಹಾಸಿಗೆಯೊಂದು ಬಾರಿ, ತೂರುವುದು ಏಕೆ? ಕೆಲಸ ಕಾರ್ಯಗಳನ್ನು ಆದಷ್ಟು ಸುಲಭಮಾಡಿಕೊಳ್ಳುವುದೇ ಯಂತ್ರ ಯುಗದ ಗುಟ್ಟು. ಟಪಾಲಾಫೀಸಿನಲ್ಲಿ ಸ್ಟಾಂಪು ಮಾರುವ ವ್ಯಕ್ತಿ ನಾಲಗೆ ನೀಡಿಕೊಂಡೇ ಕೂತರೆ, ಅಂಟಿಸುವವರಿಗೆ ಎಷ್ಟು ಸರಾಗ? ಹೋಟಲುಗಳಲ್ಲಿ ದೋಸೆ ಕೊಡುವ ತಟ್ಟೆಕೂಡ ಸ್ವಲ್ಪ ದೋಸೆಯಷ್ಟೇ ಇದ್ದರೆ, ಬಂದವರು ಅದನ್ನೂ ತಿಂದುಬಿಡುತ್ತಾರೆ; ತೊಳೆಯುವ ಬಾಬ್ತು ಖರ್ಚುವೆಚ್ಚಾದಿಗಳು ಉಳಿತಾಯ!

ಹೀಗೆಯೇ ಸ್ವತಂತ್ರಭಾರತದ ಮೇಧಾವಿ ಯುವಕರು ನಾನಾಬಗೆಯಾಗಿ ದೇಹಶ್ರಮ ಧನವ್ಯಯ ಕಾಲವ್ಯಯಗಳನ್ನುಳಿಸಿ, ತಮ್ಮ ಯುಗವನ್ನು ಸುವರ್ಣ ಯುಗ ಮಾಡಿಕೊಳ್ಳುವರೆಂದು ನಂಬೋಣವೆ?

—ಗಂಗಾಧರ.

—o—



ಎಲ್ಲೋ! ಪಾಕಿಸ್ಥಾನದ ಹಾವು ಕಣೋ ಅದು. ಆ ಕಡೆ ಪೂಂಜಿ ಬಾರಿಸಿದರೆ, ಈ ಕಡೆ ತಿರುಗಿಕೊಂಡು ಹೆಡೆ ಆಡಿಸುತ್ತೆ!!

ಚುನಾವಣಾ ಪತ್ರಗಳು

(ಮುಂದಿನ ಚುನಾವಣೆಗೆ, ಮಾದರಿಗಳು)

೧

ನಿಮ್ಮ ಘನವಾದ ಓಟನ್ನು ತೂಕವಿಲ್ಲದವರಿಗೆ ಕೊಟ್ಟು ಹಾಳುಮಾಡಬೇಡಿರಿ. ಗಣೇಶ ಗುರುತಿನ ನನಗೆ ಕೊಡಿ. "ವಿಘ್ನರಾಜೋ ವಿನಾಯಕಃ" ಎಂಬ ಆರ್ಯೋಕ್ತಿಯಂತೆ, ನನ್ನನ್ನು ನಾಯಕನನ್ನಾಗಿ ಆರಿಸಿದರೆ, ನಿಮ್ಮ ವಿಘ್ನಗಳನ್ನೆಲ್ಲ ನಾನು ನಾಶಮಾಡುವೆನು. ಅನೇಕ ದಂತಗಳನ್ನುಳ್ಳ ನನ್ನ ಭಕ್ತರ ಸೇವೆಗಾಗಿ, ನಾನೇ ಹಲ್ಲುಮುರಿದುಕೊಂಡು, ಏಕ ದಂತನಾಗಿ ಮೆರೆಯುತ್ತಿದೇನೆ.

೨

ಕನ್ನಡಿಗ ಬಾಂಧವರೆ! ಬಡವರ ಉದ್ಧಾರವೇ ನನ್ನ ಕೈಂಕರ್ಯ! ಕೇವಲ ಬಾಯಿಮಾತಿನಿಂದ ಉದ್ಧಾರವಾದೀತೆ? ಒಟ್ಟು ಬಡತನವನ್ನು ಒಮ್ಮೆಲೇ ದೂಡುವುದು ಸಾಧ್ಯವೆ?....ಇಕೊ! ಈ ಒಬ್ಬ ಬಡವನ ಬಡತನವನ್ನು ನಾಶಗೊಳಿಸಲು ಸಹಾಯಮಾಡಿ.

೩

ಗಾಂಧಿಕಿ ಜೈ. ನನಗೆ ಓಟುಕೊಡಿ. ಗಾಂಧಿಕಿ ಜೈ. ಬೇರೆ ಯಾರಿಗೂ ಕೊಡಬೇಡಿ. ಗಾಂಧಿಕಿ ಜೈ. ಗಾಂಧಿಜಿ ನಿಜವಾಗಿಯೂ ದೇವರ ಅವತಾರ. ಅವರ ಅಡಿದಾವರೆಯಲ್ಲಿ ಲೋಕವೇ ಭಕ್ತಿಯಿಂದ ತಲೆ ಬಾಗುತ್ತಿದೆ. ನನಗೆ ಓಟು ಕೊಡಿ ಗಾಂಧಿಕಿ ಜೈ ನಿಮ್ಮ ಓಟು ಯಾರಿಗೆ?....ಗಾಂಧಿಜಿಕಿ ಜೈ.

೪

ನೀವು ನಿರಕ್ಷರ ಕುಕ್ಷಿಗಳು, ಆಜನ್ಮದರಿದ್ರರು; ಹಿಂಸಾತ್ಮರು; ಅನಾರೋಗ್ಯ ಪಟುಗಳು; ಪಕ್ಷ ಪ್ರತಿಪಕ್ಷ ಧುರಂಧರರು....ನಿಮಗೆ ನಾನೇ ತಕ್ಕ ಪ್ರತಿನಿಧಿ. ನನಗೂ ಅಕ್ಷರ ಬರದು, ನಾನೂ ದರಿದ್ರ; ನನಗೂ ಹಿಂಸೆ ಎಂದರೆ ಖುಷಿ, ನನಗೂ ಸದಾ ಜ್ವರ; ನಾನೂ ಪಾರ್ಟಿ ಕಟ್ಟಿದೇನೆ.......ನನಗೆ ಓಟು ಕೊಡಿ.

೫

ಬಾಂಧವರೆ! ನಮ್ಮ ಈಗಿನ ಬಡತನಕ್ಕೂ ಅಜ್ಞಾನಕ್ಕೂ ನಾವು ಕಾರಣರಲ್ಲ; ಇದೆಲ್ಲ ಇತರರ ಪಿತೂರಿ; ಇತರರ ತಂತ್ರ; ಅವರನ್ನು ಅವಹೇಳನ

ಮಾಡಿದಷ್ಟು ನಾವು ಮುಂದುವರಿಯುತ್ತೇವೆ; ಅವರು ಬಡವರಾದರೆ, ನಾವು ಶ್ರೀಮಂತರಾದಂತೆಯೆ! ಅವರ ತಿಳುವಳಿಕೆ ತಗ್ಗಿದಷ್ಟು ನಾವು ವಿದ್ಯಾವಂತರಾದಂತೆಯೆ! ಬನ್ನಿ! ಅವರಮೇಲೆ ಕೊಳೆ ಮೆತ್ತೋಣ, ನಾವು ಪರಿಶುದ್ಧರಾಗೋಣ....ನನ್ನ ಅನುನಾಯಿಗಳಾಗಿರಿ. ನನಗೆ ನಿಮ್ಮ ಓಟುಕೊಡಿ.

೬

ನನ್ನನ್ನು ನೀವು ನಿಮ್ಮ ಪ್ರತಿನಿಧಿಯಾಗಿ ಆರಿಸಿದರೆ ಕಾಲಕಾಲಕ್ಕೆ ಮಳೆ ಬೀಳುತ್ತದೆ; ಭೂಮಿತಾಯಿ ನಕ್ಕು ನಲಿದಾಡಿ ಬೆಳೆ ಬೆಳೆದು ಕಣಜ ತುಂಬಿ ಹಸುಗಳೂ ಶಿಶುಗಳೂ ಆನಂದ ಭರಿತರಾಗುತ್ತಾರೆ. ಬರಗಾಲವೆಂಬ ಮಾತೇ ಇಲ್ಲದಾಗುತ್ತದೆ ಶಾಲಾ ಹುಡುಗರಿಗೆ ಪರೀಕ್ಷೆಯ ಕಾಲವೇ ಇಲ್ಲದಂತೆ ಮಾಡುತ್ತೇನೆ ಜಾಡ್ಯ ಜಂಜಡ ಜಗಳ ಎಲ್ಲಕ್ಕೂ ತಿಲೋದಕ. ಸಾಲ ಸೋಲ ಶೂಲ ಎಲ್ಲವೂ ನಿರ್ಮೂಲ – ನಿತ್ಯವೂ ಎರಡುಬಾರಿ ಹಳ್ಳಿ ಹಳ್ಳಿಯಲ್ಲೂ ಸುವರ್ಣವೃಷ್ಟಿ ಹೊಳೆಯೆಲ್ಲ ಹಾಲು ; ಬೆಟ್ಟವೆಲ್ಲ ಬೆಲ್ಲ ; ಮಳೆ ಎಲ್ಲ ಜೇನು ; ಮಕ್ಕಳೆಲ್ಲ ಬೃಹಸ್ಪತಿಗಳು ; ಭಿಕ್ಷುಕರೆಲ್ಲ ಕುಬೇರರು ಗಂಟಲಿರುವವರೆಲ್ಲ ಗಂಧರ್ವರು .. .... ತಮ್ಮಂಥ ತಿಳಿದವರಿಗೆ ಹೆಚ್ಚು ಹೇಳಬೇಕಾದ ಅವಶ್ಯಕತೆತಾನೆ ಏನು ?

೭

ಆತನನ್ನೂ ಈತನನ್ನೂ ನಂಬಿ ಮೋಸ ಹೋಗಬೇಡಿ ...... ನನ್ನನ್ನು ನಂಬಿ! ಅವರು ಮಾಡುವುದನ್ನು ಅವರಿಗಿಂತ ಪುಷ್ಕಳವಾಗಿ ನಾನೇ ಮಾಡುತ್ತೇನೆ

—— ೦ ——



ಕಾಶ್ಮೀರದಲ್ಲಿ 'ಸೀಸ್ ಫೈರ್' ಏನೋ ಆಯಿತು ?

ಆದರೆ...............

ಮಾವನ ತಂತಿ

೧

ಕಟ್ ಕಟ್ ಕಟ್ ಕಟ್ ಕಡಕಟ್ ಕಡಕಟ್
ತಂತಿ ಬಂದಿತ್ತ ತಮ್ಮಾ
ತಂತಿ ಬಂದಿತ್ತು ॥ ಪಲ್ಲ ॥
ಅಚ್ಚಿನ ಹಾಂಗೆ ಅಕ್ಕರ ಇತ್ತ
ಮೆಚ್ಚಿನ ಮಡದಿ ಅಕ್ಕರೆ ಇತ್ತ
ಮುಡಿಯಿಂದಿಳಿದಾ ಗುಲಾಬಿ ಹಾಂಗ
ಚಂಗನೆ ಬಂದಿತ್ತ ;
ವೈಯೊಳಗಿರುವಾ ತಂತಿ ತಂತಿಗೆ
ವಿದ್ಯುತ್ ಬಂದಿತ್ತ ;
ಗಡಿಬಿಡಿಮಾಡಿ ಮಾವನ ಮನೆಗೆ
ಕೂಡಲೆ ಕರೆ ಇತ್ತ – ತಮ್ಮಾ
ತಂತಿ ಬಂದಿತ್ತು ॥ ಕಟ್ ಕಟ್

೨

ಗೌರಿಗಿರುವಾ ಕಂಪು ಇತ್ತ
ಚೌರಿಗಿರುವಾ ಸೊಂಪು ಇತ್ತ
ಅವಳೇ ಬಂದು ಬಿಟ್ಟ ಹಾಂಗ
ಎದ್ದಾಗ ಸೋದೆ ಇತ್ತ ;
ಒಲವಿನ ಮಾತು ಆಡಿದ್ಹಾಂಗ
ಓಲೆ ಮುಟ್ಟಿತ್ತ ;
ರೈಲೇ ತಲಪಿ ಹೊಸಲೇ ಚಿಮ್ಮಿ
ಕಣ್ಣಲಿ ಕಂಡ್ಹಾಂಗೆ – ತಮ್ಮ
ತಂತಿ ಬಂದಿತ್ತು ॥ ಕಟ್ ಕಟ್

ಸಾಲದ್ಹಾಂಗ ಪಾಠವಿತ್ತ
ಶೂಲದ್ಹಾಂಗ ಆಟವಿತ್ತ
ಪರೀಕ್ಷೆ ಬಂದು ಪಾಪಿಯುಮ್ಯಾಲೆ
ಎರಗಿ ಕೂತಿತ್ತ ;
ಆದರು ಮಾವನ ತಂತಿಯ ತುಂತುರು
ಅಮೃತದ ಬಿಂದು ;
ಮಂಕು ಹಿಡಿದು ಮಲಗಿದ್ದವಗೆ
ಸಂಕಟ ಹರಿಯಿತ್ತು – ಆಗ
ಸಂಜೆಯಾಗಿತ್ತ – ತಮ್ಮಾ
ಅಂಚೆ ಬಂದಿತ್ತು – ಕಟ್ ಕಟ್
ಕಡಕಟ್ ಕಡಕಟ್, ತಂತಿ ಬಂದಿತ್ತು

(ಚೇಂದ್ರಾಯನಮಃ)

ಭಗವಂತ

ಮಾಡಬಾರದ ಕೆಲಸ ಮಾಡಿ ಬಿಟ್ಟೆ. ಇನ್ನು ಬಚಾವಾಗೋದು ಹೇಗೆ, ಅನ್ನೋದೇ ಚಿಂತೆ. ಮೂರನೆಯ ಕ್ಲಾಸ್ ಟಿಕೇಟ್ ತಕೊಂಡಮೇಲೆ, ತಗಣೆಯೇನು, ತೂಕಡಿಕೆ ಏನು, ಈ ಪತ್ರಯಪಡಬೇಕಾದ್ದೇ, ಅಲ್ಲವೆ? ಅದನ್ನ ಬಿಟ್ಟು, ಮೆಲ್ಲಗೆ ಕ್ಲೋಸ್ ಪೇಟಿಯಲ್ಲಿಳಿದು, ಎರಡನೆಯ ಕ್ಲಾಸಿನೊಳಕ್ಕೆ ನುಗ್ಗಿ (1948 ರ ಎರಡನೆ ಕ್ಲಾಸು!), ಸದ್ದಿಲ್ಲದೆ ಮೇಲಿನ ಹಾಸಿಗೇಲಿ ಮಲಗಿದ್ದೇ ತಪ್ಪು. ಶ್ರೀರಂಗಪಟ್ಟಣದವರೆಗೂ ರಾವಣೇಶ್ವರನ ತಮ್ಮನ ಹಾಗೆ ನಿದ್ದೆ ಬಂತು ಅನ್ನಿ. ಮನಸ್ಸಾಕ್ಷಿ ಚುಚ್ಚಲೇ ಇಲ್ಲ. ಅಲ್ಲಿ, ಮೆತ್ತಗೆ ಕೆಳಗಿಳಿದು ಮುಖ ತೊಳೆದುಕೊಳ್ಳೋಕೆ ಬಾತ್ ರೂಮಿಗೆ ಹೋದಾಗ, ಕೆಳಗೆ ಮಲಗಿದ್ದವರಿಗೆ ಎಚ್ಚರವಾಯಿತು ಕಿಚ ಪಿಚ ಮಾತು ಪ್ರಾರಂಭ. ಯಾರದು, ಯಾರೋ ಬೇರೆಯವರು ಬಂದ ಹಾಗಿತ್ತಲ್ಲವೆ, ಎಂಬ ಭಯಕ್ರಾಂತ ಪ್ರಶ್ನೆಗಳು! ಹೆಂಗಸರ ಧ್ವನಿ. ಬಳೆಸದ್ದು. ಆಗ ತಿಳಿಯಿತು, ನನಗೆ, ಬಾತ್ ರೂಂ ಒಳಗಿನಿಂದಲೇ, ನಾನು ಪ್ರವೇಶಮಾಡಿದ್ದು, ಹೆಂಗಸರ ಗಾಡಿ, ಅಂತ. ಕಿಸೆಯಲ್ಲೋ, ಮೂರನೆಯ ಮಹಾತರಗತಿಯ ಟಿಕೇಟು!

ಬಚಾವಾಗೋದು, ಹೇಗೆ? ನಾನೋ, ತುಂಬಾ ಮಾನಸ್ಥ; ಮಕ್ಕಳೊಂದಿಗ; ಇಬ್ಬರು ಅಳಿಯಂದಿರು ಬೇರೆ ಇದಾರೆ; ಸಾಹೇಬರು ಮೊನ್ನೆ ತಾನೆ ನನ್ನ ವಿಷಯಾನ ಸರ್ಕಾರಕ್ಕೆ ಬರೆದು, ಎರಡೂವರೆ ರೂಪಾಯಿ ಬಡ್ತಿಗೆ ಶಿಫಾರ್ಸು ಮಾಡಿದಾರೆ. ಅಂಥಾದ್ದರಲ್ಲಿ, ನಾನು ಅಶ್ಲೀಲಾಭಿಲಾಷಿಯಾಗಿ, ಕಾನೂನು ಭಂಗಮಾಡಿ, ರಾವಣೇಶ್ವರನ ಹಾಗೆ ಈ ಸೀತಾದೇವಿಯರ ಪರ್ಣಾಶ್ರಮದೊಳಕ್ಕೆ ಅತಿಕ್ರಮಮಾಡಿದೆ ಅನ್ನೋದು ಬಹಿರಂಗವಾದರೆ, ನನ್ನ ಹೆಂಡತಿ .. ನನ್ನ ಮಕ್ಕಳು ....ಅಳಿಯಂದಿರು....ಸಾಹೇಬರು....ಸರ್ಕಾರ........

ಥಟಕ್ಕನೆ, ಭಗವಂತ ಪ್ರತ್ಯಕ್ಷನಾದ; ಅಂದರೆ, ಒಂದು ಉಪಾಯ ಹೊಳೆಯಿತು. ಬಾಗಿಲಾಚೆ, ಆ ನಾರೀಮಣಿಯರು ತಮಗೆ ಅಪಾಯವೇನೂ ಇಲ್ಲವೆಂದು ನಿಶ್ಚಯಿಸಿ, ತಮ್ಮ ಗಾಬರಿಗೆ ತಾವೇ ನಕ್ಕು, (ಬಾತ್ರೂಂ ಬಾಗಿಲನ್ನು ತೆಗೆದು ಪರೀಕ್ಷಿಸಲು ಅವರಲ್ಲೊಬ್ಬರಿಗೂ ಧೈರ್ಯವಿರಲಿಲ್ಲವೆಂದು ತೋರುತ್ತೆ) ಮತ್ತೆ ನಿದ್ರಾಂಗನೆಯ ತೆಕ್ಕೆಯಲ್ಲಿ ಮೌನತಾಳಿದ್ದರು.

ನಾನು ಬಾತ್‌ರೂಮೊಳಗೆ, ನನ್ನ ಷರ್ಟನ್ನು ಬಿಚ್ಚಿ ತಲೆಗೆ ಸುತ್ತಿಕೊಂಡೆ. ಪಂಚೆಯನ್ನು ಮಂಡಿತನಕ ಎತ್ತಿ ಸುತ್ತಿದೆ. ಅಷ್ಟು ಹೊತ್ತಿಗೆ ಕಾವೇರಿ ಸೇತುವೆ ದಾಟಿ, ರೈಲು ಪಶ್ಚಿಮವಾಹಿನಿಗೆ ಬಂತು. ಸರಕ್ಕನೆ, ಬಾಗಿಲು ತೆರೆದು, ಗಾಡಿ ಉದ್ದಕ್ಕೂ ಓಡಿ, ಹೊರಬಾಗಿಲು ತೆಗೆದು, ದೀಪ ಹೊತ್ತಿಸಿ, "ಪೋರ್ಟರ್ ! ಪೋರ್ಟರ್" ಎಂದು ಕೂಗಿದೆ.

ಆಗ, ಆ ಕಾಮಿನಿಯರು ಕಣ್ಣುತೆರೆದರು. "ಮೈಸೂರ್ ಆಗಯಾ ಕ್ಯಾ" ಎಂದರು. ನಾನು, "ನೈ! ಪಶ್ಚಿಮ್‌ವಾನಿ ಹೈ" ಎಂದೆ. ಕೆಳಗೆ ಧುಮುಕಿ, ಮತ್ತೆ ಪಕ್ಕದಲ್ಲಿದ್ದ ನನ್ನ ಖಾಸಾ ಡಬ್ಬಿ ಹತ್ತಿ. ಬೆವರೊರಸಿಕೊಂಡೆ

— ರಾಯಪ್ಪ.

—o —



ಈ ಹಾಳು ಮಸಿ ಕಡ್ಡಿಗಳನ್ನೆಲ್ಲಿಟ್ಟ—

ಬಿಸಿ ಬಿಸಿ ಗಾದೆಗಳು

ಕೈಗೆ ಕೆಸರು ಮೆತ್ತಿಕೊಂಡರೂ, ಬಾಯಿಗೆ ಮೊಸರು ಸಿಕ್ಕಿದ್ದೇ ಲಾಭ

ಹೋದರೆ ಒಂದು ನೋಟು ; ಬಂದರೊಂದು ಪರ್ಮಿಟ್ಟು.

ಜೋಳಿಗೆ ಹಿಡೀತೇನೆ ಅಂದೋನು - ಮಾಳಿಗೆ ಮೇಲೆ ಕೂತ

ಹೊಟ್ಟೆಗಿಲ್ಲದ ಶಾನುಭೋಗ ಕೆಟ್ಟ ಭೋಗ ಕಲಿತ

ಕಿತ್ತೋರಿಗೆ ಹೆಗ್ಗಣವೇ ಕಾಮಧೇನು

ಹಿಂದೆ ಹೋದರೆ ಕೆರೆ ; ಮುಂದೆ ಬಂದರೆ ಬಾವಿ ;
ಬೇಸಾಯಕ್ಕೆ ಮಾತ್ರ ಬೇಜಾರು

ಸರ್ವಸಂಗ ಪರಿತ್ಯಾಗ, ಸೊಸೆ ಗಂಡನಿಗೆ ಪಾರುಪತ್ಯ

ಶಾಸ್ತ್ರ ಹೇಳೋಕೆ, ಸ್ತೋತ್ರ ಕೇಳೋಕೆ

ಹುಟ್ಟಿದಾಗ ಶಿಶು ; ಬೆಳೆದಾಗ ಥೇಟ್ ಪಶು

ಶಂಖದಿಂದ ಬಿದ್ದಿದ್ದು ತೀರ್ಥ ; ಬಿಂಕದಿಂದ ಅಂದದ್ದು ಪ್ರಸಾದ.

ಶಿಕ್ಷಣ ಪರಿಷ್ಕರಣ

ಕಾಲೇಜು ವಿದ್ಯಾಭ್ಯಾಸಕ್ಕೆ, ಅದರಲ್ಲೂ ವಿಜ್ಞಾನ ಶಿಕ್ಷಣಕ್ಕೆ. ಅಷ್ಟು ಅರ್ಹರಲ್ಲದವರು ನೂರಾರು ಮಂದಿ ನುಗ್ಗಿ ಬರುತ್ತಿರುವುದರಿಂದ, ಸ್ಥಳ ಸಂಕೋಚ, ಅಲ್ಲದೆ, ಅಪಾರ ಧನವ್ಯಯ, ಮತ್ತು ಸಂಶೋಧನಾ ಕಾರ್ಯಕ್ಕೆ ಅಡಚಣೆ, ಎಂದು ಮುಂತಾಗಿ ದೂರುವವರಿಗೆ—ಇಕೊ ! ಒಂದು ಸಲಹೆ ಇದು ಪ್ರಜಾಪ್ರಭುತ್ವದ ಯುಗ. ಕಂದಾಯ ಕೊಡುವವರನ್ನು ಕೇಳಿ ಒಪ್ಪಿಸಿ ಕಂದಾಯ ವಿಧಿಸುವಂತೆ, ಶಿಕ್ಷಣ ಹೊಂದುವವರನ್ನು ಕೇಳಿ ಒಪ್ಪಿಸಿ ಶಿಕ್ಷಣ ವಿಧಿಸಬೇಕಾದದ್ದು ನ್ಯಾಯ, ಧರ್ಮ. ಓದುಗರಿಗೇನು ಬೇಕೊ, ಅವರೇನನ್ನು ಬಯಸುತ್ತಾರೋ, ಅದನ್ನು ಒದಗಿಸುವುದು ವೃತ್ತಪತ್ರಿಕೆಗಳ ಕರ್ತವ್ಯ. ಚಿತ್ರನಿರ್ಮಾಪಕರ ಕರ್ತವ್ಯ ಪ್ರೇಕ್ಷಕರ ಅಪೇಕ್ಷೆಯನ್ನು ನೆರವೇರಿಸುವುದು. ಹಾಗೆಯೇ, ನಮ್ಮ ದೇಶದ ತರುಣ ತರುಣಿಯರ ಅಭಿಪ್ರಾಯವನ್ನು ತೆಗೆದುಕೊಂಡು, ಅದರಂತೆ ಶಿಕ್ಷಣ ವಿಷಯಗಳನ್ನಾರಿಸಿ, ಅದಕ್ಕಾಗಿ ಕಾಲೇಜುಗಳನ್ನು ನಡೆಯಿಸಿದರೆ, ಸರ್ವರಿಗೂ ಕ್ಷೇಮ.

ವಿದ್ಯಾರ್ಥಿಗಳಲ್ಲಿ ಬಹುಮಂದಿ ಜನಕ್ಕೆ ತಮ್ಮ ಆ ವಯಸ್ಸಿನಲ್ಲಿ ಬೇಕಾದದ್ದು ಮನರಂಜನೆ, ಮ್ಯಾಥಮಾಟಿಕ್ಸಲ್ಲ ; ಜಾಮೂನು, ಜಿಯಾಲಜಿ ಅಲ್ಲ ;........ಈಗ, ಅವರು ಗತ್ಯಂತರವಿಲ್ಲದೆ, ವಿಜ್ಞಾನವನ್ನು ಕಲಿಯಲು ನುಗ್ಗಿ ಬೋರೇಗೌಡನ ಹಣವನ್ನು ನಷ್ಟಗೊಳಿಸುತ್ತಾ ಇದಾರೆ ಅಷ್ಟೆ. ಇಂಥವರಿಗಾಗಿಯೇ, ಏಕೆ, ಒಂದು ಹೊಸತರಹದ ಕಾಲೇಜನ್ನು ಸ್ಥಾಪಿಸಬಾರದು ? ಅಲ್ಲಿ ಅವರು ನಾಲ್ಕು ವರ್ಷ ನಕ್ಕು ನಲಿದಾಡಲಿ. ಅನಂತರ, ಅವರಿಗೇಕೆ ಡಿಗ್ರಿ ಕೊಡಬಾರದು ? ಅಲ್ಲಿ ಪಾಠಪ್ರವಚನಗಳೇ ಬೇಕಿಲ್ಲ – ಊರಿನ ಸಿನಿಮಾಮಂದಿರಗಳಲ್ಲಿ ವಾರವಾರವೂ ಪ್ರದರ್ಶಿತವಾಗುವ ಚಿತ್ರಗಳಲ್ಲಿ ಯಾವುದಾದರೂ ನಾಲ್ಕನ್ನು ನೋಡಲೇ ಬೇಕು ; ಸಿನಿಮ ನಟನಟಿಯರ ಚಿತ್ರ ಸಂಗ್ರಹವೊಂದನ್ನು ತಯಾರಿಸಿ ಮೂರು ತಿಂಗಳಿಗೊಮ್ಮೆ ಪ್ರಿನ್ಸಿಪಾಲರಿಗೊಪ್ಪಿಸಬೇಕು. ಯಾವ ಹೋಟಲಿನಲ್ಲಿ ಯಾವ ಹೊತ್ತಿನಲ್ಲಿ ಕಾಫಿ ಹೆಚ್ಚು ರುಚಿಯಾಗಿರುತ್ತದೆ ಎಂಬ ಸಂಶೋಧನೆ ನಡೆಯಿಸಬೇಕು, ರೀಜಂಟ್ ಬೀದಿ ಟೈಲರುಗಳ ಮಟ್ಟಕ್ಕೆ ಬರುವ ಟೈಲರುಗಳು ಯಾರು, ವಸ್ತ್ರಶಾಸ್ತ್ರದ ಮುಖ್ಯ ತತ್ವಗಳೇನು, ಜಗತ್ಪ್ರಸಿದ್ಧರಾದ ಹತ್ತು ಆಟಗಾರರ ಸಾಹಸಗಳೇನೇನು, ಎಂಬುದನ್ನೆಲ್ಲ ಅರಿತುಕೊಳ್ಳಬೇಕು. ಹದಿನೈದು ಹಿಂದಿ ಹಾಡುಗಳನ್ನಾದರೂ ಸಿನಿಮಗಳಿಂದ ಕಲಿತು ಅನುಕರಿಸಬೇಕು ; ಕೇವಲ ವೇಷಭೂಷಣಗಳ

ಗಾಗಿ ಮಾತ್ರ. ತಾನು ಆಹಾರಪಾನೀಯಗಳಿಗಾಗಿ ವೆಚ್ಚಮಾಡುವುದಕ್ಕಿಂತ ಇಮ್ಮಡಿಯಾಗಿ, ನಾಲ್ಕುವರ್ಷವೂ ವೆಚ್ಚಮಾಡಬೇಕು. ಯಾರಿಗೂ ಓದಲು ಬಾರದಂತೆ, ಬರೆಯುವುದಕ್ಕೂ, ಅರ್ಥವಾಗದಂತೆ ಓದುವುದಕ್ಕೂ, ಹೊಸ ಹೊಸ ಉತ್ತರಗಳು ಸಲಸಲಕ್ಕೂ ಮೂಡಿ ಬರುವಂತೆ ಕೂಡುವುದು ಕಳೆಯುವುದು ಭಾಗ ಮಾಡುವುದು ಮುಂತಾದ ಗಣಿತ ಪ್ರಯೋಗಗಳನ್ನು ನಡೆಸುವುದಕ್ಕೂ, ಬಂಡರಾಯಿತು.

ಇಂಥ ಒಂದು ಕಾಲೇಜನ್ನು ಸ್ಥಾಪಿಸಿದರೆ, ಬಹುಮಂದಿ ಅಲ್ಲಿಗೆ ಹೋಗಿ ಸೇರಿ ಸುಖದಿಂದಿರುವರಾದ್ದರಿಂದ, ಉಳಿದ ಕೆಲವು ಪುಸ್ತಕದ ಹುಳಗಳೂ ವಿಜ್ಞಾನ ದಾಸರೂ, ತಮಗೆ ಬೇಕಾದಂತೆ ದಾಹವನ್ನು ತೀರಿಸಿಕೊಳ್ಳಬಹುದು. ವಿಚಾರಪರರು ಗಮನಿಸಬೇಕಾದ ವಿಷಯ ಇದು

—ರೇವಣ್ಣ.

ಪಂಡಿತ ನೆಹ್ರೂ ಅವರು ಏಷ್ಯ ಕಾನ್‌ಫರೆನ್ಸ್ ಕರೆದಿದ್ದು ನೋಡಿ - ಡಾ॥ ಮಲನ್ ಅವರು ಆಫ್ರಿಕಾ ಸಮ್ಮೇಳನವನ್ನು ಕರೆಯುವರಂತೆ,

* * *

ಚಿಯಾಂಗ್ ಕೈಷೆಕ್ ಅವರು ಊರುಬಿಟ್ಟು ಮುಖ ಮರೆಸಿಕೊಂಡು ಹೋದರಂತೆ - ಆದರೆ ರಾಜೀನಾಮೆ ಇತ್ತಿಲ್ಲವಂತೆ ಏಕೆಂದರೆ ಅದು ಅವಮಾನಕರವಂತೆ.

* * *

ಮುಂದಿನ ಮಹಾಸಂಗ್ರಾಮ ಪಾಲಿಸ್ಟೈನಿನಲ್ಲಿ ಆಗುವ ಸಂಭವ ಇಲ್ಲವಂತೆ. ಏಕೆ ಎಂದರೆ, ಅಟ್ಲೀ ಇವರೂ ಇಸ್ರೇಲ್ ರಾಜ್ಯವನ್ನು ಒಪ್ಪಿಕೊಂಡಿದ್ದಾರಂತೆ ಈಗ.

* * *

ಮನೆ ಸಿಕ್ಕದೆ ಇದ್ದವರನ್ನು ಅಂಡಮಾನ್ ದ್ವೀಪಕ್ಕೆ ಕಳಿಸುತ್ತಾರೆ ಎನ್ನುವುದು ಖಚಿತವಲ್ಲವಂತೆ.—

—ಅಲ್ಲಿ ಕೂಡ ಮನೆ ಅಭಾವ ಜಾಸ್ತಿ ಅಂತೆ.

* * *

ಕಾರೋಟು

ಹೊರಟೇ ಬಿಟ್ಟೆವು—ನಾನೂ ನನ್ನ ಭಾವಮೈದುನನೂ! ಹೊಸ ಕಾರು; ಅವನೇ ಡ್ರೈವರು. ಗಾಂಧೀರೋಡು, ನೆಹರು ಚೌಕ, ಸುಭಾಷ್ ರಸ್ತೆ, ಆಜಾದ್ ಮೈದಾನ, ಕಸ್ತೂರಿಬಾಯಿ ಸ್ಕೂಲು ಜೆಯಿಲು, ಹುಚ್ಚಾಸ್ಪತ್ರೆ ದಾಟಿ, ಪ್ರಕೃತಿ ದೇವಿಯು ಗ್ರಾಮ-ಭಾರತದ ಸರಳಸುಂದರ ನಂದನವನದ ನವಚೈತನ್ಯವನ್ನೀಂಟಲು ಮೂಗರಳಿಸಿದುವು, ನಲವತ್ತು ಮೈಲಿ ಗಂಟೆಗೆ ನಮ್ಮ ವೇಗ ಸಾಲುಮರಗಳೆಲ್ಲ ಹಸುರು ಫರದೆಯ ಹಾಗೆ ಎಡಬಲಗಳಲ್ಲಿ ತೋರಿ ತೂರಿ ಹಾರಿದುವು ಮೂರು ನಾಯಿ ಮರಿಗಳು ನರಕಕ್ಕೆ ಹೋದುವು. ಹೋಟಲೊಂದರ ಗ್ರಾಮಫೋನಿಂದ ಸುಬ್ಬಲಕ್ಷ್ಮಿಯವರ ತಮಿಳು ನಾಡು ಹೊಗಳಿಕೆ ಹಾಡು ಆರೆಕ್ಷಣಕಾಲ ಕಿವಿಗಿಂಪೂಡಿತು....ಒಂದು ಕೆರೆಯ ತುಂಡು, ಬೆಟ್ಟದ ಹೋಳು, ಬಯಲ ಅಂಚು ತೊರೆಯ ತುಂತುರು!....ನಿಧಾನಿಸೋ, ನಾವೇನು ಖೂನಿಮಾಡಿ ತಪ್ಪಿಸಿಕೊಳ್ಳುತ್ತಿದೇವೆಯೇ? ಎಂದೆ.. ಮೂವತ್ತಕ್ಕಿಳಿದ, ಇನ್ನೂ ಐದು, ಎಂದು ಚೌಕಾಶಿ ಮಾಡಿದೆ. ಇಪ್ಪತ್ತೇಳೆಂದು ದೊಡ್ಡ ಮನಸ್ಸು ಮಾಡಿದ. ಸಾರೋಟು, ಅಲ್ಲ, ಕಾರೋಟು-ಸಲೀಸಾಗಿ ಓಡಿತು. ಒಂದು ಭಾರಿ ಹೊಳೆ ಬಂತು ಅಡ್ಡ. ಹೆಸರು ಗೊತ್ತಿಲ್ಲ. ಗೋದಾವರಿ ಅಂತ ಅವನು, ಮಹಾನದಿ ಅಂತ ನಾನು, ಬಗೆ ಹರಿಯಲಿಲ್ಲ. ಹಿಂದಕ್ಕೆ ಬಂದರೆ, ಹಳೇ ಭೂವಿವರಣೆ ಮಾಸ್ತರನ್ನು ಪತ್ತೆ ಹಚ್ಚಿ ಅವರನ್ನೇ ಕೇಳಿ ತಿಳಿಯೋಣವೆಂದು ಸಂಧಾನಕ್ಕೆ ಸಹಿ ಹಾಕಿದೆವು ಬಡವರ ಗುಡಿಸಲುಗಳು; ಬೋರೇಗೌಡನ ರಿಕ್ತ ರಕ್ತ ಜೀವನ; ಕಣ್ಣಲ್ಲಿ ನೀರು ಬಂತು. ಹಳ್ಳಿ ಸ್ಕೂಲೊಂದು! ಆಗ ತಾನೆ ಗಂಟೆ ಹೊಡೆದು ಹುಡುಗರೆಲ್ಲರೂ ನಗುನಗುತ್ತ ಹೊರ ಬರುತ್ತಿದಾರೆ. ಎಂಥ ಆನಂದದ ದೃಶ್ಯ!

ತಾಲೋಕ್ ಕಚೇರಿ! ಸೀಮೆ ಎಣ್ಣೆ ಕ್ಯೂ; ಜಗಳವೋ ಜಗಳ! ಮಾರ್ಕೋನಿ ಸಾಹೇಬರಿಗೆ ಮನದಲ್ಲೇ ಮಂಡಿಯೂರಿದೆ; ನಮ್ಮನ್ನ ಈ ತಾಪತ್ರಯದಿಂದ ತಪ್ಪಿಸಿದನಲ್ಲಾ, ಅಂತ. ಊರಾಚೆ ತೋಪು ದುರ್ವಾಸನೆ. ನೆರಳಿದ್ದ ಕಡೆ ನಾತ. ಗುಡಿ!....ಅಲ್ಲೇ ಕಾರು ನಿಲ್ಲಿಸಿ, ಬುಟ್ಟಿ ಬಿಚ್ಚಿ ಬುತ್ತಿ ಉಣ್ಣೋಣ ಅಂದುಕೊಂಡೆವು. ಆದರೆ, ತೋಪಿಗಿಂತ ಗುಡಿ ಅಸಹ್ಯ. ಅಲ್ಲದೆ, ಬುಟ್ಟಿಯೇ ನಾಸ್ತಿ. ಅದನ್ನ ಕಾರಲ್ಲಿರಿಸುವುದರೊಳಗೆ ಭಾವಮೈದುನನಿಗೆ ಆತುರ. ಸದ್ಯಃ, ಪೆಟ್ರೋಲನ್ನಾದರೂ ತುಂಬಿಸಿದನಲ್ಲಾ!

ಹೊಟ್ಟೆ ತಾಳ ನಿಲ್ಲಿಸೋಕೆ ಹೋಟೆಲಲ್ಲಿ ಅಂತ ಹುಡುಕುತ್ತ ಹೊರಟೆವು. ಅಲ್ಲೊಂದು ಬಸ್ ಸ್ಟ್ಯಾಂಡ್ ಸಿಕ್ಕಿತು ಎದುರಿಗೆ ಫಲಹಾರ ಮಂದಿರ. ಬಸ್ಸಿನಲ್ಲಿ ಬಂದಿಳಿಯುವ ದೊಡ್ಡ ಮನುಷ್ಯರುಗಳಿಗೆ ನಿಂಬೆಹಣ್ಣು ಹಾರ ಮಾರುವ ಅಂಗಡಿ ಇರಬೇಕೆಂದುಕೊಂಡೆ. ಆದರೆ, ಒಳಗಿಂದ ಸೀದ ದೋಸೆ ವಾಸ್ನೆ ಬಂತು.

ಅದನ್ನ ತಿಂದು ಮತೆ ಕಾರನ್ನೋಡಿಸಿದೆವು — ನಲವತ್ತೈದು ಮೈಲಿ ಸ್ಪೀಡು. ಗ್ರಹಚಾರಕ್ಕೆ ಒಂದು ಸುಂಕದ ಕಟ್ಟೆ. ಊರಿಂದೂರಿಗೆ ಹೋಗುವಾಗ ಇದೊಂದು ಗಂಡಾಂತರ. ಉದ್ದಕ್ಕೂ ಕಾಸು ಚೆಲ್ಲುತ್ತ ಹೋಗಬೇಕು; ಗಂಟು ಬಿಚ್ಚುತ್ತಾ ತೋರಿಸಬೇಕು. ಭಾವನ್ಮೈದುನನಿಗೆ ಕೋಪ ಬಂತು. ನೆಟ್ಟಗೆ ನುಗ್ಗೇಬಿಟ್ಟ. ಸುಂಕದ ಗುಮಾಸ್ತೆ ನ ಬಾನೆಟ್‌ಮೇಲೆ ನಿಂತು ನಿಂತ ಹಾಗೆಯೇ ಹತ್ತಿಸಿಕೊಂಡು ಕಾರು ಮುಂದುವರಿಯಿತು. ಪಾಪ, ಪ್ರಾಣಿ, ಬಾಯಿಬಡಿದುಕೊಂಡು ಕೂಗಾಡಿದ. ನಾವು ವೇಗವನ್ನು ಐವತ್ತಕ್ಕೇರಿಸಿದೆವು. ಆಗ, ಗಲಾಟೆ ನಿಲ್ಲಿಸಿದ

ದಾರಿಯಲ್ಲಿ ಅವನ ಮಾವನ ಮನೆ ಇತ್ತಂತೆ. ಅಲ್ಲಿ ಇಳಿಸಿ ಬಿಡಿ, ಅಂತ ಬೇಡಿಕೊಂಡ. ಅಲ್ಲಿಗೆ ಹೋಗಿ, ಅವನು ಕೊಟ್ಟ ಕಾಫಿ ಕುಡಿದು, ಡೊಂಕುದಾರಿ ಮೂಲಕ ಮನೆಗೆ ಹಿಂತಿರುಗಿದೆವು ಪೆಟ್ರೋಲ್ ಮುಗಿದದ್ದರಿಂದ, ಮೂರು ಮೈಲಿ ನೂಕಬೇಕಾಯಿತು. ದೇವರ ದಯೆ. ದಾರಿಯಲ್ಲಿ ಸೋಮಾರಿಗಳು ತುಂಬ. ನಾವು ಒಳಗೆ ಕೂತೇ ಇದ್ದೆವು.

—ಶಾಮಣ್ಣ.

ಡರ್ಬಾನ್‌ನ ಭಾರತೀಯರ ಕೊಲೆಗೆಲ್ಲಾ ಶ್ರೀ ಸ್ಟಾಲಿನ್‌ರವರ ಪ್ರಭಾವವೇ ಕಾರಣ ಎಂದು ಡಾ|| ಮಲಾನ್ ಹೇಳಿದಂತೆ—

—ಈಗ ಶ್ರೀ ಸ್ಟಾಲಿನ್‌ರವರ ಸರ್ಕಾರ ಚೈನಾದಲ್ಲಿ ನಡೆದ ಅಂತರ್ಜಗಳಕ್ಕೆ ಡಾ|| ಮಲಾನ್‌ರವರೇ ಕಾರಣ ಅನ್ನುವುದಕ್ಕೆ.

• • •

“ಈ ದಂತಧಾವನ ಚೂರ್ಣವು ಹಲ್ಲಿಗೆ ಬಲು ಸೊಗಸು” ಡಾ|| ಪಟ್ಟಾಭಿ.

ಜಾಹೀರಾತು

— ಈ ದಂತಧಾವನ ಚೂರ್ಣ ತಯಾರುಮಾಡುವವರು ಡಾಬ್ಸ್‌ಪೇಟೆಯಲ್ಲಿರುವ ಪಟ್ಟಾಭಿ ಅವರಂತೆ

• • •

ಅಯ್ಯೋ!

ಜನವರಿ ಮೂವತ್ತು. ಸಾಯಂಕಾಲ ಏಳು ಏಳೂವರೆ ಗಂಟೆ ಕೈ ಕೈ ಹಿಸುಕುತ್ತಾ, ರಹೀಂ ವರಾಂಡದಲ್ಲಿ ಅಡ್ಡಾಡುತ್ತಿದ್ದ. ಅವನನ್ನ ಕರೆದುಕೊಂಡು ವಾಕಿಂಗ್ ಹೋಗಿ ಬರೋಣ ಎಂದು ಹೋಗಿದ್ದಾಗ. 'ಇದೇನೋ ರಹೀಂ ಹೀಗೆ ಶತಪಥ ಸುತ್ತಾ ಇದ್ದಿ. ಮುಖ ಬೇರೆ ಹೀಗಿದೆ. ಯಾಕೆ? ಮನೇಲಿ ಯಾರಿಗಾದರೂ ಖಾಯಿಲೇನೆ' ಎಂದೆ.

'ಇಲ್ಲಪ್ಪಾ, ಮನೇಲಿ ಸದ್ಯ ಎಲ್ಲರೂ ಇನ್ನ ಚೆನ್ನ ಆದರೆ ಹಿಂದಿನದು ಜ್ಞಾಪಿಸಿಕೊಂಡು ಕೈಕೈಹಿಸುಕುತ್ತಾ ಇದ್ದೇನೆ'

'ಅಂಥದ್ದೇನು ರಹೀಂ?'

'ಹತ್ತು ಹದಿನೈದು ವರ್ಷದ ಹಿಂದಿನ ಮಾತು ನೋಡು. ಪೂನಾದಲ್ಲಿ ಎಲ್. ಎಲ್‌ಬೀಗೆ ಓದುತ್ತಿದ್ದಾಗ, ಒಂದು ದಿವಸ ವಾಕಿಂಗ್ ಹೋಗಿ ಬರುತ್ತಿದ್ದೆ. ರಸ್ತೆ ತುದಿಯಲ್ಲಿ ಏನೋ ಜಗಳ ನಡೀತಾ ಇತ್ತು. ದೊಂಬಿ ಸೇರಿತ್ತು ಏನು ನೋಡೋಣ ಅಂತ ಹತ್ತಿರ ಹೋದೆ ಹುಡುಗರು ಹುಡುಗರು ಚೆಂಡಾಟದ ಜಗಳವನ್ನು ರಸ್ತೆಗೂ ತಂದಿದ್ದರು. ನಾನು ನೋಡುತ್ತಿದ್ದ ಹಾಗೆ ಒಬ್ಬ ಧಡಿಯ ಇನ್ನೊಬ್ಬ ಹುಡುಗನ ತಲೆಮೇಲೆ ಒಂದು ದೊಡ್ಡ ಕಲ್ಲನ್ನ ಎಸೆದಿದ್ದ. ಆ ಕಲ್ಲು ಅವನ ತಲೆಮೇಲೆ ಬಿದ್ದಿದ್ದರೆ ಆ ಹುಡುಗ ಆಗಲೇ ಫಡ್ಚಾ ಆಗಿ ಬಿಡುತ್ತಿದ್ದ ಇದನ್ನು ನೋಡಿದ ಕೂಡಲೇ ನನ್ನ ಎದೆ ಹಾರಿಹೋಯ್ತು ತಕ್ಷಣ ಓಡಿ ಆ ಹುಡುಗನನ್ನು ಆಕಡೆಗೆ ನೂಕಿದೆ ಆ ಕಲ್ಲು ನನ್ನ ಕಿರುಬೆರಳಿಗೆ ತಾಕಿ ಕೆಳಕ್ಕೆ ಬಿದ್ದುಹೋಯ್ತು.

ಬೇಗ ಆ ಹುಡುಗನನ್ನು ಎಳೆದುಕೊಂಡು ಕಾಲುದಾರಿಯಲ್ಲಿ ಓಡಿಹೋದೆ.

ಅವನ ಮನೆ ಎಲ್ಲಿ ಎಂದು ಕೇಳಿ, ಅವನನ್ನು ಮನೇಗೆ ತಲಪಿಸಿದೆ ಆಗಲೇ ಅವನ ಹೆಸರೇನು ಎಂದು ಕೇಳಿದ್ದು. 'ನಾ ವಿ ಘೋಡ್ಸೆ' ಎಂದು ಅವನು ಹೇಳಿದ.

'ಅಷ್ಟುದಿವಸದ ಹಿಂದೆ ನಡೆದಿದ್ದು ನಿನಗೆ ಇನ್ನೂ ಹೇಗೆ ಜ್ಞಾಪಕ ರಹೀಂ?'

'ಹಿಂದೂ ಹುಡುಗ ಒಬ್ಬ' 'ನನ್ನ ಹೆಸರು ಘೋಡ್ಸೆ' ಎಂದು ಕೆನೆದಾಗ, ನನಗೆ ವಹವ್ವಾ ಎನ್ನಿಸಿತು ಹಾಗೇ ಜ್ಞಾಪಕ ಉಳಿದಿದ್ದು ಆಗ ಮಾತ್ರ ನಾನು ಅಲ್ಲಿರದಿದ್ದರೆ ಎಷ್ಟುಚೆನ್ನಾಗಿತ್ತು ಎಂದು ಈಗ ಕೈ ಕೈ ಹಿಸಿಕುತ್ತಿದ್ದೇನೆ—

* * *

ನೌಕರೀ ಪಂದ್ಯಗಳು

[ಮದರಾಸ್ ಪ್ರಾಂತದಲ್ಲಿ ಬಡವರಿಗೂ ಬಲ್ಲಿದವರಿಗೂ ಮನರಂಜನೆಯನ್ನುಂಟು ಮಾಡುತ್ತಿದ್ದ ಕುದುರೆ ಜೂಜುಗಳನ್ನು ರದ್ದುಮಾಡಿರುವುದರಿಂದ, ಅಲ್ಲಿ ಹೊಸ ವಿಧಾನದ ಪಂದ್ಯವೊಂದನ್ನು ಮೇಧಾವಿಗಳಾದ ಜನಸೇವಕರು ಕಲ್ಪಿಸಲಿರುವರು. ಚಾಕರೀಗಳಿಸುವುದಕ್ಕಾಗಿ ವಿದ್ಯಾವಂತ ತರುಣರು ಪೈಪೋಟಿ ಹೂಡುವುದನ್ನೇ ಬಾಜಿ ಕಟ್ಟುವುದಕ್ಕಾಗಿ ಉಪಯೋಗಿಸಲಾಗುವುದು. ಈ ಪಂದ್ಯದ ವಿವರಗಳನ್ನು ಮುಂದೆ, ಪತ್ರಿಕೆಗಳಲ್ಲಿ ಈ ರೀತಿ ಪ್ರಕಟಿಸಲಾಗುವುದು]

ಗಿಂಡಿ ಸರ್ಕಾರಿ ವಠಾರದಲ್ಲಿ ನಡೆಯುವ ನೌಕರೀ ಪಂದ್ಯಗಳಲ್ಲಿ ಹುರಿಯಾಳುಗಳು ಮತ್ತು ಸಿಲೆಕ್ಷನುಗಳು

ಶನಿವಾರ

ತಂಬಾರಂ ಡಿ. ಎಸ್. ಪಿ. ಪಟ್ಟೆ—(೫ ಶತಕ) ೩ ಗಂಟೆಗೆ: ಸೋಮನಾಥ ಮತ್ತು ಶಿಂಗಾರಂ ಇವರುಗಳೇ ಗೆಲ್ಲತಕ್ಕ ಹುರಿಯಾಳುಗಳು. ಶಿಂಗಾರಂಗೆ ಡಿಗ್ರಿ ಕಡಮೆ, ಆದರೂ, ಬೆಂಬಲ ಹೆಚ್ಚು. ನಾಗಭೂಷಣ ಇದುವರೆಗಿನ ಅಡಚಣೆಗಳನ್ನೆಲ್ಲ ಜಯಪ್ರದವಾಗಿ ದಾಟಿದಾನೆ. ಮಾವನ ಬಲ ಸ್ವಲ್ಪ. ಎಂ. ಎಲ್. ಎ ಗೆ ತೀರ ಸಂಟ. ಶಿಂಗಾರಂ ಪ್ರ ಪ್ರಾ ಸಿ. ಪಂದ್ಯದಲ್ಲಿ ಎರಡನೆಯವನಾಗಿ ಬಂದಿದ್ದ. ಸೋಮನಾಥ ಮ|| ರಾ|| ಶ್ರೀ.......ಯವರ ತಯಾರಿಕೆ. ದಿ. ಬ. ರವರ ಅಳಿಯನ ತಮ್ಮ. ಆದ್ದರಿಂದ, ಮೆಚ್ಚತಕ್ಕದ್ದೇ. ನಾಗನಾಥ ಕಳೆದ ಸೀಸನ್‌ನಲ್ಲಿ ಡಿಲ್ಲಿಯಲ್ಲಿ ಮೂರನೆಯವ. ಈಚೆಗೆ ತರಬೇತು ಬಹಳ. ಓಡಾಟ ಅವನದೇ ಬಹಳ. ಕಡೇಗಳಿಗೆಯಲ್ಲಿ ಲಪಟಾಯಿಸಬಲ್ಲ ಜಾಣ, ಹುಮ್ಮಸ್ಸಿದೆ. ಬಹುಶಃ (೧) ಸೋಮನಾಥ (೨) ನಾಗನಾಥ.

ಲಾಲ್‌ಗುಡಿ ಮುನಿಸಿಫ್ ಪಟ್ಟೆ— (೩½ ಶತಕ) ೩½ ಗಂಟೆಗೆ; ಎದೆ ಚಾಚಿ ಮುನ್ನುಗ್ಗಬಲ್ಲ ಖ್ಯಾತಿಯಿಂದಲೂ ತಿನ್ನವೇಲಿ ಸಬ್. ಜ. (೪ ಶತಕ) ಪಂದ್ಯದಲ್ಲಿ ಮೂರನೆಯ ಸ್ಥಾನವನ್ನು ಅನಾಯಾಸವಾಗಿ ಗೆದ್ದದ್ದರಿಂದಲೂ, ರಾಂ ನಾರಾಯಣ್ ಎಂಬ ತಳ್ಳನೆಯ ಕೆಂಚ ಗಮನಾರ್ಹ. ಹಣ ಕಟ್ಟಿದವರಿಗೆ ಲಾಭ ಸಿದ್ಧ. ಸಿಂಗಣ್ಣಾ ಕಡೇ ನಿಮಿಷತನಕ ಸವರಿಸಬಲ್ಲ. ಮೋಹನ್ ಎಂಬ ಬಿಳಿಯ

ಬ್ಯಾರಿಸ್ಟರ್, ಈಚೆಗೆ ದೆಸೆ ಚೆನ್ನಾಗಿದೆ. ಅವನ ಸೋದರಸೊಾವನೇ ಅಧ್ಯಕ್ಷ. ಗುಲ್‌ಷನ್ ಹಾಗೂ ರಹೀಂ ಎಂಬುವವರಿಗೂ ಚಾನ್ಸಿವೆ. ಬಹುಶಃ (೧) ಮೋಹನ್ (೨) ರಾಂನಾರಾಯಣ್ (೩) ಗುಲ್‌ಷನ್.

ಪಟೆನ್ ಡಿ. ಇ. ಒ. ಪಟ್ಟೆ—(೩ ಶತಕ) ೪ ಗಂಟೆಗೆ : ಕಳೆದ ಸಲವೇ 'ಮಂಕುಬೂದಿ' ಎಂಬ ಅಡ್ಡ ಹೆಸರಿನ ಕಂದು ಬಣ್ಣದ ಹುರಿಯಾಳಿಗೆ ಊಟಿಯಲ್ಲಿ ಪ್ರಥಮಸ್ಥಾನ ಬರಬೇಕಿತ್ತು. ಈ ಬಾರಿ ಎದುರಾಳಿಗಳ ಪ್ರಭಾವ ಇನ್ನೂ ಹೆಚ್ಚು. ಕಮಲನಾಗ. 'ಕಾಂಚಾಣ', ಇಬ್ಬರೂ ಸಾಮಾನ್ಯರಲ್ಲ ಅವರ ಚಿಕ್ಕಪ್ಪಂದಿರು ಕಮಿಟಿಯಲ್ಲಿದ್ದಾರೆ ನೋಡುವುದಕ್ಕೆ ಬಡಕಲಾದರೂ, ನಾಗಾ ಲೋಟಿ ಪಂದ್ಯದ ದಿನ ಗಾಳಿ ಎತ್ತ ಕಡೆ, ನೋಡಿ, ಬಾಜಿಕಟ್ಟಿ ಇಬ್ಬರ ಪ್ರಯತ್ನಗಳೂ, ನಿನ್ನೆವರೆಗೆ, ಆಶಾದಾಯಕ ಜಾತಿಯೂ ಗೆಲ್ಲುವ ಜಾತಿ ಬಹುಶಃ (೧) ಕಾಂಚಾಣ. (೨) ಮಂ. ಬೂದಿ (೩) ಕಮಲನಾಗ

ಕ್ರಿಸ್‌ಮಸ್ ನಂತರದ ವಿಶೇಷ ಪಂದ್ಯಗಳು

ಜೂಜುಗಾರರಿಗೆ ಅಗತ್ಯ ವಿವರಗಳ ಸಂಗ್ರಹ

(ಗಿಂಡಿ ಬಾತ್ಮಿ)

ಪಾಂಟಿಯಾಕ್ ಸವಾರಿ ಪಟ್ಟೆ—ಚಿನ್ನದ ಕಟ್ಟೆಗೆ : (೧೦ ಶತಕ) ಪಳನಿ ೯-೧೨ ರಾಮಣ್ಣ ೯-೯ ಮುರುಗ ಪ್ರಿಯು ೯-೭ ನನಗೆ ಬೇಡಪ್ಪ ೯-೭ ಅಳಿಯ ಸಂತಾನ ೯-೬ ಕಾರಾಗೃಹ ೮-೫

ಕಂಟ್ರೋಲ್ ಇಲಾಖೆ ಪಟ್ಟೆ -ಕರೀಕಟ್ಟೆಗೆ ; (೮ ಶತಕ) ತಮ್ಮಣ್ಣ ೯-೧೦ ತಮ್ಮಯ್ಯ ೯-೪ ತಮ್ಮಣ್ಣಯ್ಯ ೮-೯ ಅಶೋಕ್ ಕುಮಾರ್ ೮-೭ ಆಷಾಢ ೭-೧೧ ಸೇವಾಪ್ರಿಯ ೭-೧೦ ಖಾದಿ ೭-೮

ಇತ್ಯಾದಿ.

ದೇವಸ್ಥಾನಗಳ ಆಡಳಿತವನ್ನೆಲ್ಲಾ ಪ್ರಗತಿಕೊಂಡಿದ ಪಾಶ್ಚಿಮಾತ್ಯರು ಹೇಗೆ ನಡೆಸುತ್ತಾರೆಂದು ತಿಳಿದು ಬರಲು ಮುಜರಾಯಿ ಮಂತ್ರಿಗಳು ಅಮೇರಿಕಾಕ್ಕೆ ಪ್ರವಾಸ ಹೋಗುತ್ತಾರೆಂಬುದು ಸುಳ್ಳೆಂದು ಮದರಾಸಿನಿಂದ ಕಾಗದ ಬಂದಿದೆ.

* * *

ಮಾರ್ಕೆಟ್ ಚೌಕದಲ್ಲಿ

"ಕೇಳಿರಿ, ಕೇಳಿರಿ, ಕೇಳಿರಿ,

ಮಹಾತ್ಮರ ತಪಸ್ಸಿನ ಫಲ ನಮಗೆ ಈಗ ಸಿಕ್ಕಿದೆ. ನಾವೆಲ್ಲರೂ ಸ್ವತಂತ್ರರು ನಮ್ಮ ಭವಿಷ್ಯ ನಮ್ಮ ಕೈಲಿದೆ. ಬಲಭೀಮನಂತೆ ಸರ್ದಾರ್ ಪಟೇಲರೂ, ನರವೀರನಂತೆ ಪಂಡಿತ್ ನೆಹ್ರೂ ಅವರೂ, ಧರ್ಮಜನಂತಿರುವ ರಾಜಾಜಿ ಜತೆಯಲ್ಲಿ ಧರ್ಮರಾಜ್ಯ ಆಳುತ್ತಿರುವರು. ಅಂದಮೇಲೆ ನಮ್ಮ ದೇಶದಲ್ಲಿ ಬೆಳೆ ಹುಲುಸಾಗಿ ಬೆಳೆಯುವುದು. ದನಕರುಗಳು ಯಥೇಚ್ಛವಾಗಿ ಹಾಲುಕೊಡುವುವು. ಮರ ಮರದಲ್ಲೂ ಪೊಟರೆ ಪೊಟರೆಯಲ್ಲೂ ಜೇನು ಗೂಡು ಕಟ್ಟುವುದು ಅಂದ ಮೇಲೆ ದೇಶಾದ್ಯಂತ ಹಾಲು ಜೇನು ಹರಿದಾಡುವುದು, ಅನ್ನ ಸತ್ರಗಳೇರ್ಪಡುವುವು ಅಲ್ಲಿ ನಳಪಾಕವೇರ್ಪಡುವುದು. ಇಡೀ ಭಾರತದಲ್ಲಿ ಒಬ್ಬನಾದರೂ ಹಸಿವಿನಿಂದ ನರಳಬೇಕಾಗುವುದಿಲ್ಲ.

ಆ ಕಾಲ ಇಷ್ಟರಲ್ಲೇ ಬರಹತ್ತಿದೆ. ಅದು ಬರುವ ಹೊತ್ತಿಗೆ ನೀವು ಸಿದ್ಧರಾಗಿರಬೇಡವೇ? ಈಗಲೇ ಆರಂಭಿಸಿ. ಏಳಿ, ಏಳಿ, ಜಾಗ್ರತೆಗೊಳ್ಳಿ. ಇಂತಹ ಸೊಗಸು ಆಹಾರ ಭಕ್ಷ್ಯಗಳನ್ನು ತಿನ್ನಲು ಸಿದ್ಧಮಾಡಿಕೊಳ್ಳಬೇಡವೇ.

ಹೇಗೆ ಎನ್ನಬಹುದು ನೀವು! — ಇದಕ್ಕೆಲ್ಲಾ ಮೂಲಭೂತವಾದುದು. ಹಲ್ಲುಗಳು. ನಿಮ್ಮ ಹಲ್ಲುಗಳು ಶುಭ್ರವಾಗಿ ಹರಿತವಾಗಿ ಸ್ಥಿರವಾಗಿ ಇರಬೇಕು ಅಲ್ಲವೇ?

ಅದಕ್ಕೇ ನಾನು ರಾಷ್ಟ್ರಸೇವೆಯನ್ನು ಹೀಗೆ ಮಾಡುತ್ತಿದ್ದೇನೆ ಮುಂಬರುವ ದಿನಗಳಿಗೆ ಇಂದೇ ಸಿದ್ಧಮಾಡಿದ್ದೇನೆ ಈ ಹಲ್ಲುಪುಡಿಯನ್ನು ಉಪಯೋಗಿಸಿ —

ಒಂದಾಣೆಗೆ ಎರಡು ಪ್ಯಾಕೆಟ್ — ಈಗಲೇ ಕೊಳ್ಳಿ."

ಲಿಮಿಟೆಡ್ ಕಂಪೆನಿ

ಇಪ್ಪತ್ತೈದು ಕೋಟಿ ರೂಪಾಯಿ ಭಂಡವಾಳವಿದ್ದ—ಒಂದು ಘನವಾದ … ಲಿಮಿಟೆಡ್ ಕಂಪೆನಿಯ, ವಾರಸುದಾರರ (ಡೈರೆಕ್ಟರ್ ಅನ್ನೋದಕ್ಕೆ ಅಂದಹಾಗೇ ಕನ್ನಡದಲ್ಲಿ ಏನು ?) ಸಭೆ ಸೇರಿತ್ತು. ಹೊಸಾಹೊಸ ಕಾರ್ಮಿಕರ ಕಾನೂನುಗಳು, ಮಳೆ ಬಂದಾಗ ಕಪ್ಪೆಗಳು ಹುಟ್ಟಿದಂತೆ, ಕ್ಷಾಮಕಾಲದಲ್ಲಿ ಅವಳಿ ಜವಳಿಗಳಾದಂತೆ, ದುರ್ಭಿಕ್ಷದಲ್ಲಿ ಅಧಿಕಮಾಸ ಬಂದಂತೆ ಬರಹತ್ತಿದ್ದುವು. ಅದರಲ್ಲೊಂದಂತೂ ಅತಿ ಸೊಗಸು. ಕಾರ್ಮಿಕರಿಗೆ ವಸತಿ ಸೌಲಭ್ಯ ಮಾಡಿಕೊಡದೆ ಇದ್ದರೆ, ಕಂಪೆನಿಯ ಆಡಳಿತವನ್ನು ಸರ್ಕಾರವೇ ವಹಿಸಿಕೊಳ್ಳಬಹುದು. ಆದರೆ ಕಂಪೆನಿಯ ಷೇರುದಾರರಿಗೆ ಕೊಟ್ಟ ಹಣ ಕೊಡುತ್ತೇವೆಂದು-ಅಲ್ಲ! ಕಾರ್ಮಿಕರಿಗೆ ವಸತಿ ಸೌಲಭ್ಯ ಮಾಡಿಕೊಡುತ್ತೇವೆಂದೂ ಅಲ್ಲ! ಇದು ಎಲ್ಲರಿಗೂ ಒಂದು ತರಹ ಶಿಕ್ಷೆ ಅನ್ನುವ ಮಟ್ಟಿಗೆ ಅರ್ಥವಾಗಿತ್ತು ಈ….ವಾರಸುದಾರರು. ಮೀನ ಮೇಷ ಯೋಚಿಸಿದರು. ಲೆಕ್ಕಪಕ್ಕ ಹಾಕಿದರು. ತಲೆಕೆಳಕಾಗಿ ಲಾಗ ಹಾಕಿದರೂ, ಷೇರುದಾರರ ಬಾಯಿಗೆ ಮಣ್ಣು ಹಾಕಿದರೂ, ಈಗಿನ ಪರಿಸ್ಥಿತಿಯಲ್ಲಿ, ಕಾರ್ಮಿಕರಿಗೆ ವಸತಿ ಸೌಲಭ್ಯಗಳನ್ನು ಕೊಡಲು ಆಗುವಂತಿರಲಿಲ್ಲ. ಇಟ್ಟಿಗೆ ಬೆಲೆ ಕೇಳಿದರೆ ಇದೇನು ಚಿನ್ನದ ಇಟ್ಟಿಗೆಗಳೇ ಎನ್ನುವಂತಿತ್ತು. ಸಿಮೆಂಟ್ ಬೆಲೆ ಕೇಳಿದರೆ ಗುಸುಗುಸು ಮಾತಿನಲ್ಲಿ ಮುಕ್ತಾಯವಾಗುತ್ತಿತ್ತು. ಮರವಂತೂ ಏರಲಾರದಷ್ಟು ಔನ್ನತ್ಯ. ಇನ್ನು ಕಬ್ಬಿಣ, ಎದೆಯೇ ಕಬ್ಬಿಣವಾಗಬೇಕು. ಹೀಗಿರುವ ಪರಿಸ್ಥಿತಿಯಲ್ಲಿ ……ಕಂಪೆನಿಯ ವಾರಸುದಾರರೆಲ್ಲಾ ಒಂದು ತೀರ್ಮಾನಕ್ಕೆ ಬಂದರು.

ಈಗಿನ ಶಾಸನಗಳಿಗೆ ಅನುಗುಣವಾಗಿ ಕೆಲಸಮಾಡಲು ಸಾಧ್ಯವಿಲ್ಲ. ನಾವೇ ಸುಮ್ಮನಿದ್ದರೆ, ಸರ್ಕಾರವೇ ಈ ಕಂಪೆನಿಯ ವಹಿವಾಟನ್ನು ಕಾಸುಕೊಡದೆ ವಹಿಸಿಕೊಳ್ಳಬಹುದು. ಇದಕ್ಕೆಲ್ಲಾ ಒಂದೇ ಮದ್ದು. ಒಂದು ಮುಷ್ಕರ ಹೂಡಿಸುವುದು ಎಂದು.

ಮಾರನೆಯ ದಿನ ಘನವಾದ ದಿನ ಪತ್ರಿಕೆಯಲ್ಲಿ ಒಂದು ಜಾಹೀರಾತು ಹೊರಟಿತು.

" ಬೇಕು! ಪುಷ್ಕಳವಾಗಿ ಬೆಳೆದ? ತಲೆಗೆದರಿದ ಕೆಂಪು ಷರ್ಟಿರುವ ಒಬ್ಬ ಧೃಡಕಾಯ. ಸಂಪು ಹೂಡುವುದರಲ್ಲಿ ಪರಿಶ್ರಮವಿರಬೇಕು. ತಕ್ಕಮಟ್ಟಿಗೆ ವಾಚಾಳಿಯಾಗಿರಬೇಕು. ಸಂಬಳ 'ಸಂಪಿ'ಗೆ ತಕ್ಕಂತೆ. "

.......ಕಂಪೆನಿಯ ಕಾರ್ಮಿಕ ಮುಖಂಡನೇ ಈ ಜಾಹೀರಾತಿಗೆ ಮೊದಲ ಅರ್ಜಿದಾರ. ಅವನಿಗೇ ಒಂದು ದಿನ ಸಂಹಿಗೆ ನೂರರಂತೆ ಮಾತಾಯ್ತು

ನೂರಕ್ಕೆ ತಕ್ಕ ಕೆಲಸ ಮಾಡಿದ ಆತ. ಆತನ ಮುಂದಾಳುತನದಲ್ಲಿ ಕಾರ್ಮಿಕರೆಲ್ಲರೂ ನಮ್ಮ ಗುಡಿಸಲುಗಳಿಂದ ಕಾರ್ಖಾನೆಗೆ ಹೋಗಲು ಬ್ಯೂಕ್ ಮೋಟಾರ್ ವಾಹನ ಸೌಕರ್ಯ ಕೊಡಲೇ ಬೇಕು ಎಂದು ಸಂಪು ಹೂಡಿದರು.

ಸರಕಾರವು ಸಂಪು ಕಾನೂನು ವಿರುದ್ಧ ಅಂತೇನೋ ಹೇಳಿದರು


ಆದರೂ ಸಂಪು ಸೊಂಪಾಗಿ ನಡೆಯುತ್ತಿದೆ. ....ಕಂಪೆನಿಯ ವಾರಸುದಾರರೆಲ್ಲಾ ಸುಖವಾಗಿದ್ದಾರೆ.

ಈ ಸಂಪು ಹೂಡಿದ ಮೂರು ತಿಂಗಳಲ್ಲಿ ಇಡೀ ಭಾರತದ ಒಬ್ಬೊಬ್ಬನಿಗೂ ಅರ್ಧಗಜ ಬಟ್ಟೆ ಮಾಡಬಹುದಾಗಿತ್ತೆಂದು ಯಾರೋ ಗಣಿತಜ್ಞರು ಒಮ್ಮೆ ಎಲ್ಲೋ ಹೇಳಿದರು,

ಅದು ಯಾರಿಗೂ ಕೇಳಿಸಲೇ ಇಲ್ಲ

—ಶಿವಣ್ಣ.

—o—



ದನ ತಿನ್ನೋನು.......ಅಣೆ ಬೇರೆ ಇಟ್ಟುಕೊಂಡು ಭಾಷಣ ಮಾಡಿದನಂತೆ.

ಹೆಚ್ಚು ಆಹಾರ ಬೆಳೆಯಿರಿ

ಊರ ಚೌಕದಲ್ಲಿ ಗಾಂಧೀ ಟೋಪಿ, ನೆಹ್ರೂ ಜುಬ್ಬ, ಪಟೇಲ್ ಚಪ್ಪಲಿ, ರಾಜಾಜಿ ಅಂಗವಸ್ತ್ರ, ಹಾಕಿಕೊಂಡು "ಜನರೇ! ನೀವೆಲ್ಲಾ ಹೆಚ್ಚು ಆಹಾರ ಬೆಳೆಯಬೇಕು; ಇಲ್ಲದಿದ್ದರೆ ನಮಗೆ ಬಂದ ಸ್ವಾತಂತ್ರ್ಯ ಹಾಳು'' ಎಂದು ಘಂಟಾ ಘೋಷವಾಗಿ ಭಾಷಣಮಾಡಿದಾಗ, ನನಗೆ ತುಂಬಾ ನಾಚಿಕೆಯಾಯಿತು. ನಾನು ನಮ್ಮನೆಯಲ್ಲಿ ಒಂದು ದಿನ ಒಂದು ತರಕಾರಿ, ಒಂದು ಭತ್ತದ ಕಾಳು, ಒಂದು ಒಂದು ರಾಗಿ ತೆನೆ ಒಂದು ಕಬ್ಬಿನ ಜಲ್ಲೆ ಇಲ್ಲಿನ ತನಕ ಬೆಳೆದಿತ್ತಿಲ್ಲ. ಆದರೂ ಮೂರುಹೊತ್ತು ಸೊಂಪಾಗಿ ಕಂಡವರು ಬೆಳೆದಿದ್ದನ್ನು ತಿನ್ನುತ್ತಿದ್ದೆ. ಅದಕ್ಕೇ ಅವರ ಭಾಷಣ ಮನದಟ್ಟಿ ನನಗೆ ನಾಚಿಕೆಯಾದುದು.

ಮನೆಗೆ ಬಂದವನೇ ಒಂದು ಶಪಥ ಮಾಡಿದೆ. ಈ ತಿಂಗಳು ಏನಾದರೂ ಒಂದು ಬೆಳೆಯಲೇ ಬೇಕು, ನಾನೇ ಖುದ್ದಾಗಿ ಅಂತ.

ಮಾರನೆಯ ದಿನ ಪುಸ್ತಕ ಭಂಡಾರಕ್ಕೆ ಹೋಗಿ ಓದಿದೆ. ಭತ್ತದ ಗಿಡ ಹಾಕಬೇಕಾದರೆ ತುಂಬಾ ನೀರಾವರಿಬೇಕು ನಾಟಿ ನೆಡಬೇಕು. ಇವೆಲ್ಲಾ ಕಷ್ಟದ ಕೆಲಸ ರಾಗಿ ತೆನೆ ಬೆಳೆಯುಕ್ಕೆ ಮಳೆರಾಯ ವರ ಕೊಡಬೇಕು ಕಬ್ಬು ಆದೂ ಒಂದು ಅರ್ಧಕಬ್ಬು ಬೆಳೆಯುವುದು ಅಷ್ಟು ಲಾಭಕರವಲ್ಲ. ಹೀಗಾಗಿ ತರಕಾರಿಗಳೇ ಸುಲಭ ಸಾಧ್ಯ ಎಂದು ಮನಗಂಡೆ. ಅದರಲ್ಲೂ ಗೆಡ್ಡೆ ಗೆಣಸುಗಳಾದರೆ ಬೆಳೆ ಸುಲಭ ಎಂದೂ ಓದಿಕೊಂಡೆ ಇದರಲ್ಲೂ ಗೆಣಸೇ ಸ್ವಲ್ಪ ಧೃಢಕಾಯವಾದ ಗೆಡ್ಡೆ ಎಂದೂ ತಿಳಿಯಿತು. ಸರಿ ಮೂರಡಿ ಅಗಲ ಆರಡಿ ಉದ್ದ ಅರ್ಧ ಅಡಿ ಆಳ ಒಂದು ಹಳ್ಳ ತೋಡಿ (ಅಷ್ಟೇ ನಮ್ಮನೆ ಕಾಂಪೌಂಡು) ಅದರಲ್ಲಿ ಒಂದು ಡರ್ಜ ಗೆಣಸು ಬಿತ್ತೋದು. ನಾನೇ ಅದಕ್ಕೆ ನೀರೆರೆದು, ಪಾತಿಕಟ್ಟಿ ಕಳೆಕಿತ್ತು ಗೆಡ್ಡೆ ಗಳನ್ನು ಬೆಳೆಸೋದು ಎಂದು ನಿರ್ಧರಿಸಿದೆ.

ಮೂರನೆಯ ದಿನ ವ್ಯವಸಾಯದ ಕಛೇರಿಗೆ ಖದ್ದರ್ ಪಂಚೆ, ಗಾಂಧಿ ಟೋಪಿ ಹಾಕಿಕೊಂಡು ಹೋಗಿ ಒಂದು ಡರ್ಜ ಗೆಣಸಿನಗೆಡ್ಡೆ ಕೊಂಡುಕೊಂಡು ಬಂದೆ, ಛತ್ರಿ ಕೆಳಗೇ ಹಿಡಿದು ತಂದೆ. ನಮ್ಮ ಕಾಂಪೌಂಡಿನಲ್ಲಿ ಮಾಡಿದ್ದ ಗುಣಿ ಯಲ್ಲಿ ಅಡಿ ದೂರಕ್ಕೊಂದರಂತೆ ಪುಸ್ತಕದಲ್ಲಿ ಹೇಳಿದ ಹಾಗೇ, ಇವುಗಳನ್ನು ಹೂತೆ. ಹನ್ನೆರಡನ್ನೂ ಮಣ್ಣುಮಾಡಿದೆ. ಏಳುವುದಕ್ಕೆ ಹೋಗ್ತೀನೀ ಸೊಂಟವೇ ಬಿಡಲೊಲ್ಲದು. ಎಲ್ಲೋ ಹಿಡಿದುಕೊಂಡು ಬಿಟ್ಟಿತ್ತು; ಏಳುವುದಕ್ಕೇ ಆಗಲಿಲ್ಲ.

ಕಡೇಗೆ ಏನೋ ವರಸೆ ಮಾಡಿ ಲಟಕ್ಕನೆ ಎದ್ದೆ. ವಸ್ತಾದಿ ಭೀಮಯ್ಯನಿಗೆ ಹೇಳಿ ಕಳಿಸಿ ಸೊಂಟ ಸರಿಮಾಡಿಸಿಕೊಂಡೆ. ಅಲ್ಲಿಂದಾಚೆ ದಿನಾಲೂ ನಾನೇ ಖುದ್ದಾಗಿ ಎದುರಿಗೆ ನಿಂತುಕೊಂಡು, ಮಕ್ಕಳ ಕೈಲಿ ನೀರು ಹಾಕಿಸುತ್ತಾ ಬಂದೆ. ಹೆಂಡತಿ ಕೈಲೇ ಕಳೆ ಕೀಳಿಸಿದೆ ಹೀಗೆ ಸಂಸಾರವೇ ಹೆಚ್ಚು ಆಹಾರ ಬೆಳೆಯುಲು ಉದ್ಯುಕ್ತ ವಾಯ್ತು.

ಎರಡು ತಿಂಗಳಾಯ್ತು. ಹನ್ನೆರಡು ಗಿಡಗಳೂ ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಯಾಗುತ್ತಾ ಬಂತು. ಇನ್ನೇನು ಹದಿನೈದು ದಿನಗಳಲ್ಲಿ, ಬೆಳೆ ಕೈಗೆ ಬರುವ ಕಾಲ. ಅವು ಬೆಳೆದ ಝೋರಿನಲ್ಲಿ ಏನಿಲ್ಲ ಅಂದರೂ ನೂರು ಗೆಣಸು ಸಿಗಬಹುದು ಅಂತಿದ್ದೆ. ಆದರೆ ಮಾರನೆಯ ಬೆಳಿಗ್ಗೆ ನೋಡಿದರೆ ಒಂದು ಗಿಡ ಬುಡಸಮೇತ ಕಿತ್ತುಹಾಕಲ್ಪಟ್ಟಿತ್ತು ಅದರಲ್ಲಿದ್ದ ಗೆಡ್ಡೆಗಳೆಲ್ಲಾ ಅರ್ಧಂಬರ್ಧ ತಿನ್ನಲ್ಪಟ್ಟಿತ್ತು. ಕಂಡವರಂದರು ಹೆಗ್ಗಣದ ಕೆಲಸ ಎಂದು. ಸರಿ ! ಬೇಲಿ ಹಾಕಿಸಿದೆ, ಹೆಗ್ಗಣ ಬರದೇ ಇರಲಿ ಅಂತ. ಆದರೆ ಮೂರು ದಿನಗಳಾದ ಮೇಲೆ ನಾಲ್ಕು ಗಿಡಗಳೇ ಮಾಯ. ಯಾರೋ ಕಳ್ಳರು ಬಂದು ಹೊಡೆದುಕೊಂಡು ಹೋಗಿದ್ದಾರೆ ಎಂದು ಬಂದವರು ಹೇಳಿದರು—ಕಳ್ಳರ ಕೈತರಿಯುಲಿ ಎಂದು ಗಾಜಿನ ಚೂರುಗಳನ್ನು ಪಾತಿಯಲ್ಲೆಲ್ಲಾ ನೆಡಸಿದೆ.

ಇನ್ನೂ ಮೂರು ದಿನ ಆಯ್ತು. ಬೆಳಿಗ್ಗೆ ಹೋಗಿ ನೋಡಿದರೆ - ಎಲೆಗಳ ಮೇಲೆಲ್ಲಾ ಏರೋಪ್ಲೇನ್ ಶಬ್ದ ಮಾಡುತ್ತಾ ದೊಡ್ಡ ದೊಡ್ಡ ಕಾಳಸಂತೇಲೇ ಬೆಳೆದಂತಹ ಜೀರದುಂಬಿಗಳು ಓಡಾಡುತ್ತಿದ್ದುವು ; ಎಲೆಗಳನ್ನೆಲ್ಲಾ ಅರ್ಧಕ್ಕರ್ಧ ತಿಂದೂ ಬಿಟ್ಟಿದ್ದುವು. ನೋಡಿದವರು ಹೇಳಿದರು ವ್ಯೆಲುತುತ್ತ ಚೆಲ್ಲು ಹುಳು ಹುಪ್ಪಟೆ ಬರುಲ್ಲ ಅಂತ. ಹಾಗೇ ಮಾಡಿದೆ.

ಇನ್ನೆರಡು ದಿನ ಆದಮೇಲೆ ಬೆಳಿಗ್ಗೆ ಹೋಗ್ತೀನಿ ತೋಟಕ್ಕೆ, ಒಂದು ಹೆಗ್ಗಣ ಸತ್ತು ಬಿದ್ದಿದೆ ತೋಟದಲ್ಲಿ. ಆದರೆ ಸಾಯುವುದಕ್ಕೆ ಮುಂಚೆ ಇದು ಬದ್ದ ಗೆಣಸಿನ ಗಿಡಗಳನ್ನೆಲ್ಲಾ ಕಿತ್ತೆಸೆದು, ತಿನ್ನುವ ಝೋರಿನಲ್ಲಿ ವ್ಯೆಲುತುತ್ತ ತಿಂದು ಸತ್ತಿದೆ.

ಒಂದು ಗಿಡವೂ ಉಳಿದಿಲ್ಲ. ಆಗ ಬಂದು ನೋಡಿದವರು ಹೇಳಿದರು, ಗಿಡ ಎಲ್ಲಾ ಹೋದರೂ ಪಾತಿ ಅಗೆದು ನೋಡಿದರೆ, ಎರಡೋ ಮೂರೋ ಗೆಣಸು ಸಿಗಬಹುದು ಅಂತ.

ಪಾತಿ ಕೆರೆದೂ ಕೆರೆದೂ ನೋಡಿದೆ - ನಂಗೆ ಸಿಕ್ಕಿದ್ದು ಗಾಜಿನ ಚೂರು ವ್ಯೆಲುತುತ್ತ ಎರಡು ಜೀರದುಂಬಿ ಹೆಣಗಳು.
